# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು: ಮಹೇಶ್ವರಿ ಭೀಮಶಿ ಭರಮಣ್ಣವರ
EDITOR: MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail: belagavivarte1@gmail.com
epaper. belagavivarte.com
Regd No : G2/PMG/KA/NK/BM/157/26-28

Volume: 01 Issue : 64 SATURDAY 16-05-2026 PRGI No : KNKAN/26/A0962 Pages:4 Rs.2.00 M: 9742418836

## ನೀರು ಹರಿಸುವ ಕ್ರಮ ಕೈಗೊಂಡಿರುವ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರಿಗೆ ಅಭಿನಂದನೆ



**ಬೆಳಗಾವಿ ವಾರ್ತೆ ಗೋಕಾಕ:** ಜನ ಹಾಗೂ ಜಾನುವಾ ರುಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಹಿಡಕಲ್ ಜಲಾಶಯದಿಂದ ಘಟಪ್ರಭಾ ಎಡದಂಡೆ ಕಾಲುವೆಗೆ ಬರುವ ದಿ. 22 ಮತ್ತು ಚಿಕ್ಕೋಡಿ ಉಪ ಕಾಲುವೆಗೆ ಬರುವ ದಿ. 18 ರಿಂದ ನೀರು ಹರಿಸಲು ಕ್ರಮ ಕೈಗೊಂಡಿರುವ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರಿಗೆ ಅರಭಾವಿ ಶಾಸಕ ಹಾಗೂ ಬೆಮುಲ್ ಅಧ್ಯಕ್ಷ ಬಾಲ ಚಂದ್ರ ಜಾರಕಿಹೊಳಿಯವರು ಅಭಿನಂದನೆ ಸಲ್ಲಿಸಿದ್ದಾರೆ. ತೀವ್ರ ಬರ ಮತ್ತು ಬಿಸಿಲಿನ ಪ್ರಖರತೆ ಹೆಚ್ಚಾಗುತ್ತಿರುವುದರಿಂದ ಜನ ಮತ್ತು ಜಾನುವಾರುಗಳಿಗೆ ನೀರಿಲ್ಲದೇ ತೊಂದರೆ ಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಿಡ್ಕಲ್ ಜಲಾಶಯದಿಂದ ಚಿಕ್ಕೋಡಿ ಉಪ– ಕಾಲುವೆಗೆ ಬರುವ ಸೋಮವಾರ ದಿ. 18 ರಿಂದ ಮುಂದಿನ ಹತ್ತು ದಿನಗಳ ವರೆಗೆ ದಿನಾಲು 550 ಕ್ಯೂಸೆಕ್ಸ್ ನಂತೆ 0.475 ಟಿಎಂಸಿ ನೀರನ್ನು ಹರಿಸಲಾಗುತ್ತಿದೆ. ಅದ ರಂತೆ , ಘಟಪ್ರಭಾ ಎಡದಂಡೆ ಕಾಲುವೆಗೆ 2650 ಕ್ಯೂಸೆಕ್ಸ್ ರಂತೆ (ಜಿಎಲ್ಬಿಸಿ 2400 ಕ್ಯೂಸೆಕ್ಸ್, ಕನ್ವೆನ್ಸ್ ಲಾಸ್ 100 ಕ್ಯೂಸೆಕ್ಸ್) ಕೋಟಬಾಗಿ ಏತ ನೀರಾವರಿ ಯೋಜನೆಗೆ ಸೇರಿಸಿ ಒಟ್ಟು 2.289 ಟಿಎಂಸಿ ನೀರನ್ನು ಬರುವ ದಿನಾಂಕ 22 ರಿಂದ 10 ದಿನಗಳ ವರೆಗೆ ಒಟ್ಟು 2.764 ಟಿಎಂಸಿ ನೀರು ಬಿಡುಗಡೆ ಮಾಡ ಲು ಸಚಿವರು ಆದೇಶ ನೀಡಿದ್ದಾರೆ. ಜನ ಮತ್ತು ಜಾನುವಾರುಗಳಿಗೆ ನೀರನ್ನು ಹರಿಸುವಂತೆ ನಾನು ಸತೀಶ್ ಜಾರಕಿಹೊಳಿಯವರಿಗೆ ಕೋರಿಕೆಯನ್ನು ಮಂಡಿಸಿದ್ದರಿ ಂದ ಸಾರ್ವಜನಿಕ ಹಿತದೃಷ್ಟಿಯಿಂದ ಹಿಡ್ಕಲ್ ಜಲಾಶಯದಿಂದ ಘಟಪ್ರಭಾ ಕಾಲು ವೆಗಳಿಗೆ ನೀರನ್ನು ಬಿಡುಗಡೆ ಮಾಡುವಂತೆ ನೀರಾ ವರಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಘಟ ಪ್ರಭಾ ಬಲದಂಡೆ ಕಾಲುವೆ( ಜಿಆರ್ಬಿ ಸಿ) ಯ ದುರಸ್ತಿ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ನೀರನ್ನು ಹರಿಸ ಲು ಸ್ವಲ್ಪ ವಿಳಂಬವಾಗಬ ಹುದು. ಆದ್ದ ರಿಂದ ಘಟಪ್ರಭಾ ಬಲದಂಡೆ ಕಾಲುವೆ ( ಜಿ. ಆರ್.ಬಿ.ಸಿ) ಯ ಸಾರ್ವ ಜನಿಕರು ಸಹಕರಿಸುವಂತೆ ಶಾಸಕ ಬಾಲಚಂದ್ರ ಜಾರ ಕಿಹೊಳಿಯವರು ಮನವಿ ಮಾಡಿಕೊಂಡಿದ್ದಾರೆ.

## ಒಳ್ಳೆಯ ಕೆಲಸಕ್ಕೆ ಎಚ್‌ಡಿಕೆ ವಿರೋಧ: ಡಿಕೆಶಿ ತಿರುಗೇಟು

ಬೆಂಗಳೂರು: "ಕುಮಾರಸ್ವಾಮಿ ಅವರು ನಮ್ಮ ಬಗ್ಗೆ ಟೀಕೆ ಮಾಡಲಿಲ್ಲ ಎಂದರೆ ರಾಜಕೀಯವಾಗಿ ಬದುಕಿರಲು ಆಗುವುದಿಲ್ಲ. ನಾವು ಒಳ್ಳೆಯ ಕೆಲಸ ಮಾಡುತ್ತೇವೆ, ಅವರು ವಿರೋಧ ಮಾಡುತ್ತಾರೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಬೆಂಗಳೂರಿನ ಸದಾಶಿವ ನಗರದ ತಮ್ಮ ನಿವಾಸದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು

ಕುಮಾರಸ್ವಾಮಿ ಅವರು ಬಿಡದಿ ಟೌನ್ ಶಿಪ್ ಯೋಜನೆಯ ಬಗ್ಗೆ ಟೀಕೆ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ "ಅವರು ಮಾಡಿದ ಯೋಜನೆಯನ್ನೇ ನಾವು ಮುಂದುವರೆಸುತ್ತಾ ಇರುವುದು. ನಾನು ರೈತರ ಬಳಿ ಮಾತನಾಡಲು ಸಮಯ, ದಿನಾಂಕ ನಿಗದಿ ಮಾಡಿಕೊಂಡು ಹೋಗುತ್ತೇನೆ. ರೈತರು ನನಗೆ ಎರಡೇಟು ಹೊಡೆಯಬಹುದು, ಅಷ್ಟೇ ತಾನೇ ಬಟ್ಟೆ ಹರಿಯಬಹುದು, ಕಲ್ಲೆಸೆಬಹುದು, ಧಿಕ್ಕಾರ ಹಾಕಬಹುದು. ಅದಕ್ಕೆಲ್ಲಾ ಹೆದರಿಕೊಳ್ಳಲು ಆಗುತ್ತದೆಯೇ? ಮುಂದೆ ಅವರ ಭವಿಷ್ಯ, ಮಕ್ಕಳ ಹಾಗೂ ಆಸ್ತಿಗಳ ಭವಿಷ್ಯ ಮುಖ್ಯ. ಇವತ್ತಲ್ಲ ಮುಂದಿನ 20 ವರ್ಷಗಳ ನಂತರ ಬಿಡದಿ, ಬೆಂಗಳೂರು ದಕ್ಷಿಣದ ಜನರು ನನ್ನನ್ನು ನೆನಪಿಸಿಕೊಳ್ಳುತ್ತಾರೆ" ಎಂದರು.

"ಕುಮಾರಸ್ವಾಮಿ ಅವರೇ ಈ ಯೋಜನೆಯ ಭೂಮಿಯನ್ನು ಡಿನೋಟಿಫೈ ಮಾಡಬಹುದಿತ್ತಲ್ಲವೇ? ಯಾಕೆ ಮಾಡಲಿಲ್ಲ? ನಾನು ಡಿನೋಟಿಫೈ ಮಾಡಲು ತಯಾರಿಲ್ಲ. ಅವರು ಡಿನೋಟಿಫೈ ಮಾಡಿ ಎಷ್ಟು ಅನುಭವಿಸುತ್ತಿದ್ದಾರೆ ಎಂದು ಅವರಿಗೆ ಗೊತ್ತು. ಯಡಿಯೂರಪ್ಪ ಅವರಿಗೆ, ನನಗೂ ಗೊತ್ತಿದೆ" ಎಂದು ತಿರುಗೇಟು ನೀಡಿದರು.



### ಬೆಲೆ ಏರಿಕೆ ಮೋದಿ ಅವರ ಕೊಡುಗೆ

"ಬೆಲೆ ಏರಿಕೆ ಮೋದಿ ಅವರ ಕೊಡುಗೆ. ಅವರು ಬೇರೆ ರಾಷ್ಟ್ರಗಳ ಜೊತೆ ಉತ್ತಮ ಸಂಬಂಧ ಉಳಿಸಿಕೊಂಡು ಬಂದಿಲ್ಲ. ಅಂತರರಾಷ್ಟ್ರೀಯ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಮೋದಿ ಅವರು ನಿಭಾಯಿಸುವಲ್ಲಿ ವಿಫಲರಾಗಿದ್ದಾರೆ. ಅದಕ್ಕೆ ಅವರು ವಿದ್ಯುತ್ ಉಳಿಸಿ, ಪೆಟ್ರೋಲ್ ಬಳಸಬೇಡಿ ಎಂದು ಹೇಳುತ್ತಿದ್ದಾರೆ. ಇಂಧನಗಳನ್ನು ಬಳಸದೇ ದಿನನಿತ್ಯ ಜೀವನ ಮಾಡುವುದು ಹೇಗೆ. ಅನೇಕರು ತಮ್ಮ ಬೆಂಗಾವಲು ಪಡೆ ವಾಹನಗಳನ್ನು ಕಡಿತ ಮಾಡಿದ್ದಾರೆ. ಇದು ಆಗಬಹುದು. ಆದರೆ ಜನ ಸಾಮಾನ್ಯ ಓಡಾಟ ಮಾಡದೇ ಇರಲು ಹೇಗೆ ಸಾಧ್ಯ. ಬದುಕಿಗಾಗಿ ಪ್ರಯಾಣ ಮಾಡಬೇಕಲ್ಲವೇ? ಚಿನ್ನ ಖರೀದಿ ಮಾಡಬೇಡಿ ಎಂದಿದ್ದಾರೆ ಇದು ಹೇಗೆ ಸಾಧ್ಯ. ವಿವಾಹಿತ ಮಹಿಳೆಯರಿಗೆ ಮಾಂಗಲ್ಯ ಸರ ಬೇಕು. ಹೀಗಿದ್ದಾಗ ಚಿನ್ನ ಕೊಂಡುಕೊಳ್ಳಬೇಡಿ ಎಂಬುದು ಹೇಗೆ ಸಾಧ್ಯ" ಎಂದರು.

"ದೇಶ ದೊಡ್ಡ ದುರಂತದ ಸ್ಥಿತಿಗೆ ಬಂದಿದೆ. ಅಡುಗೆ ಎಣ್ಣೆ ಬಳಸಬೇಡಿ ಎಂದರೆ ಎಲ್ಲಿ ಕಡಿಮೆ ಮಾಡೋಕೆ ಆಗುತ್ತೆ. ಇದೆಲ್ಲಾ ಮಾಡೋಕೆ ಆಗಲ್ಲ. ಜನ ಸಂಪಾದನೆ ಮಾಡುತ್ತಾರೆ ಬದುಕುತ್ತಾರೆ. ಯಾರನ್ನೂ ನಿಯಂತ್ರಣ ಮಾಡೋಕೆ ಆಗಲ್ಲ" ಎಂದರು.

### ಸತೀಶನ್‌ಗೆ ಅಭಿನಂದನೆ

ಕೇರಳಕ್ಕೆ ನೂತನ ಸಿಎಂ ಆಯ್ಕೆಯಾಗಿರುವ ಬಗ್ಗೆ ಕೇಳಿದಾಗ, "ನಾನು ಅವರಿಗೆ ಶುಭಾಶಯ ಕೋರುತ್ತೇನೆ. ಪಕ್ಷದಲ್ಲಿ ಅರ್ಹತೆ ಇರುವ ಅನೇಕ ಹಿರಿಯ ನಾಯಕರು ಇದ್ದಾರೆ. ಪಕ್ಷದ ಹೈಕಮಾಂಡ್ ಸತೀಶನ್ ಅವರಿಗೆ ಅವಕಾಶ ನೀಡಿದೆ. ಅವರಿಗೆ ನಾನು ಮನಃಪೂರ್ವಕವಾಗಿ ಶುಭ ಕೋರುತ್ತೇನೆ. ಎಲ್ಲಾ ಮೈತ್ರಿ ಪಕ್ಷಗಳಿಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ಜನರ ಆಶೋತ್ತರಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತೇವೆ" ಎಂದರು.

ಎಸ್ ಐ ಆರ್ ಕರ್ನಾಟಕಕ್ಕೆ ಕಾಲಿಡುತ್ತಿರುವ ಬಗ್ಗೆ ಕೇಳಿದಾಗ, "ನಮಗೂ ಇದರ ಬಗ್ಗೆ ಅರಿವಿದೆ. ಪಕ್ಷದ ನಾಯಕರಿಗೆ ಇದರ ಬಗ್ಗೆ ತಿಳುವಳಿಕೆ ಮೂಡಿಸಲಾಗಿದೆ. ಎಲ್ಲಾ ಪಕ್ಷಗಳು ಈ ಕೆಲಸ ಮಾಡುತ್ತಿವೆ. ಬಿಜೆಪಿ, ಜನತಾದಳ ಎಲ್ಲರೂ ಅವರವರ ಮತಗಳನ್ನು ರಕ್ಷಿಸುವ ಕೆಲಸ ಮಾಡುತ್ತಿದ್ದಾರೆ.

ತಮಿಳುನಾಡು ಸಿಎಂ ವಿಜಯ್ ಅವರಿಗೆ ಶುಭಾಶಯ ತಿಳಿಸಿದ ಬಗ್ಗೆ ಕೇಳಿದಾಗ, ಹೌದು ನಿನ್ನೆ ಅವರಿಗೆ ಶುಭಕೋರಿದ್ದೇನೆ ಎಂದರು.

"ಜನಸಾಮಾನ್ಯರು ಸಂಪಾದಿಸಿದ ಆಸ್ತಿಗಳಿಗೆ ಸರಿಯಾದ ರೀತಿಯಲ್ಲಿ ದಾಖಲೆಗಳನ್ನು ಒದಗಿಸಿಕೊಡಬೇಕು ಎಂದು ನಾವು ಆರನೇ ಗ್ಯಾರಂಟಿಯಾಗಿ "ಭೂಮಿ ಗ್ಯಾರಂಟಿ"ಯನ್ನು ಜಾರಿಗೆ ತಂದಿದ್ದೇವೆ. ಜನರ ಮನೆ ಬಾಗಿಲಿಗೆ ಇ ಖಾತೆಗಳನ್ನು ತಲುಪಿಸುವ ವ್ಯವಸ್ಥೆ ಮಾಡಿದ್ದೇವೆ. ಬಿ ಯಿಂದ ಎ ಖಾತೆ ಬದಲಾವಣೆ ಮಾಡಿಕೊಡುತ್ತಿದ್ದೇವೆ" ಎಂದರು.

## ಧಾರಾಕಾರ ಗಾಳಿ ಮಳೆ



ಗೋಕಾಕ: ನಗರದ ಪ್ರವೇಶದಲ್ಲಿರುವ ಶಿವಾಜಿ ವೃತ್ತದಲ್ಲಿ ಧಾರಾಕಾರ ಗಾಳಿ ಮಳೆಗೆ ರಸ್ತೆಯ ಡಿವೈಡರಗೆ ಅಳವಡಿಸಿದ್ದ ಬೃಹತ್ ಜಾಹಿರಾತು ಫಲಕ ಮುರಿದು ಬಿದ್ದಿರುವದು.

**ಬೆಳಗಾವಿ ವಾರ್ತೆ ಗೋಕಾಕ:** ನಿಗಿ ನಿಗಿ ಕೆಂಡವಾಗಿದ್ದ ಗೋಕಾಕ ನಗರಕ್ಕೆ ಬುಧವಾರ ಸಂಜೆ ಸುಮಾರು 1ಗಂಟೆಗೂ ಹೆಚ್ಚು ಕಾಲ ಧಾರಾಕಾರ ಗಾಳಿ ಮಳೆ ಸುರಿದಿದೆ. ನಗರದ ಪ್ರವೇಶದಲ್ಲಿರುವ ಶಿವಾಜಿ ವೃತ್ತದಲ್ಲಿ ಧಾರಾಕಾರ ಗಾಳಿ ಮಳೆಗೆ ರಸ್ತೆಯ ಡಿವೈಡರಗೆ ಅಳವಡಿಸಿದ್ದ ಬೃಹತ್ ಜಾಹಿರಾತು ಫಲಕ ಮುರಿದು ಬಿದ್ದಿದೆ. ಜಾರಹಿರಾತು ಫಲಕ ಮುರಿದ ಪರಿಣಾಮ ಅದರ ಪಕ್ಕದಲ್ಲೆ ಇದ್ದ 33ಕೆವಿ ವಿದ್ಯುತ್ ಕಂಬಕ್ಕೆ ಹಾನಿಯುಂಟಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಗೋಕಾಕ ನಗರ ಅಷ್ಟೇಯಲ್ಲದೆ ತಾಲೂಕಿನ ವಿವಿಧೆಡೆ ಭರ್ಜರಿ ಮಳೆ ಸುರಿದಿದ್ದು ಕೆಲವೆಡೆ ಮರಗಳು ಧರೆಗುರುಳಿವೆ. ಬಿಸಿಲಿನ ಬೆಗೆಯಿಂದ ತತ್ತರಿಸಿದ ಜನತೆಗೆ ಮಳೆ ತಂಪೆರೆದಿದೆ.

## ಶಿರಗುಪ್ಪಿಯಲ್ಲಿ ಅರಿಹಂತ ಸೊಸೈಟಿಯ 62ನೇ ಶಾಖೆ ಪ್ರಾರಂಭ..! ಈ ಭಾಗದ ಆರ್ಥಿಕ ಪ್ರಗತಿಗೆ ಹೊಸ ಶೆಖೆ: ಉತ್ತಮಅಣ್ಣಾ ಪಾಟೀಲ..!!

**ಬೆಳಗಾವಿ ವಾರ್ತೆ ಮೋಳೆ ;–** ನಮ್ಮೆಲ್ಲರ ಮಾರ್ಗ ದರ್ಶಕರು, ನಮ್ಮ ಸಂಸ್ಥೆಯ ಪ್ರೇರಣಾ ಮೂರ್ತಿ ದಿವಂಗತ ರಾವಸಾಬ್ ಅಣ್ಣಾ ಪಾಟೀಲ್ ಅವರ ಮಾರ್ಗದರ್ಶನ ಮತ್ತು ಗ್ರಾಮೀಣ ಭಾಗದ ಆರ್ಥಿಕ ಪ್ರಗತಿಗಾಗಿ ಅವರ ಕಂಡು ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಬೋರಗಾಂವದ ಶ್ರೀ ಅರಿಹಂತ್ ಕೋ–ಆಪ್‌ರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್ ಮಲ್ಟಿಸ್ಟೆಟ್ ಸಂಸ್ಥೆಯು ತನ್ನ ನೂತನ ಶಾಖೆಯನ್ನು ಕಾಗವಾಡ ತಾಲೂಕಿನ ಶಿರಗುಪ್ಪಿಯಲ್ಲಿ ಪ್ರಾರಂಭಿಸಲಾ ಗಿದ್ದು, ಇದರಿಂದ ಈ ಭಾಗದ ಆರ್ಥಿಕ ಪ್ರಗತಿಯ ಹೊಸ ಶೆಖೆ ಪ್ರಾರಂಭಗೊಳ್ಳಲಿದೆ ಎಂದು ಯುವ ಮುಖಂಡರು ಮತ್ತು ಸಂಸ್ಥೆಯ ಸಂಚಾಲಕರಾದ ಉತ್ತಮಅಣ್ಣಾ ಪಾಟೀಲ್ ಅಭಿಪ್ರಾಯ ಪಟ್ಟರು.

. ಅವರು ಗುರುವಾರ ದಿನಾಂಕ 14 ರಂದು ಕಾಗವಾಡ ತಾಲೂಕಿನ ಶಿರಗುಪ್ಪಿ ಗ್ರಾಮದಲ್ಲಿ ಬೋರಗಾಂವದ ಶ್ರೀ ಅರಿಹಂತ್ ಕೋ–ಆಪ್‌ರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್ ಮಲ್ಟಿಸ್ಟೆಟ್ ಸಂಸ್ಥೆಯ 62 ನೇ ಶಾಖೆಯನ್ನು ಉದ್ಘಾಟಿಸಿ, ಮಾತನಾಡುತ್ತಿದ್ದರು. ರಾವಸಾಬ್ ಅಣ್ಣಾ ಅವರ ಮಾರ್ಗದರ್ಶನದಲ್ಲಿ ಅರಿಹಂತ್ ಉದ್ಯೋಗ ಸಮೂಹ ಸಂಸ್ಥೆಗಳ ಮಾತೃಸಂಸ್ಥೆಯಾಗಿರುವ ಅರಿಹಂತ್ ಸೊಸೈಟಿಯು ಈಗಾಗಲೇ ಒಟ್ಟು 1726 ಕೋಟಿ ಠೇವಣಿ ಸಂಗ್ರಹಿಸಿ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮದಾರರಿಗೆ ಆರ್ಥಿಕ ಸಹಕಾರ ನೀಡುತ್ತಾ ವಿವಿಧ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ಮೂಡಿಸಿದೆ. ಜೊತೆಗೆ ರಾವಸಾಬ್ ಅಣ್ಣಾ ಅವರ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡು, ಗ್ರಾಮೀಣ ಭಾಗದ ಪ್ರತಿಯೊಬ್ಬರಿಗೂ ವೈದ್ಯಕೀಯ ಸೇವೆ ನೀಡುತ್ತಿದೆ ಎಂದರು.

ಇದೇ ವೇಳೆ ನೂತನ ಶಾಖೆಯನ್ನು ವಿಧಿ–ವಿಧಾನಗಳೊಂದಿಗೆ ಪೂಜೆ ನೆರವೇರಿಸಿ, ರಿಬ್ಬನ್ ಕತ್ತರಿಸುವ ಮೂಲಕ ಗಣ್ಯರೊಂದಿಗೆ ಸೇರಿ ಉದ್ಘಾಟಿಸಲಾಯಿತು. ಜೊತೆಗೆ ಲಾಕರ್ ಪೂಜೆಯನ್ನು ನೆರವೇರಿಸಿ, ನೂತನ ಶಾಖೆಯ ಕಾರ್ಯಕಲಾಪಗಳು ಇಂದಿನಿಂದ ಪ್ರಾರಂಭಗೊಂಡವು. ಈ ವೇಳೆ ಸಂಸ್ಥೆಯ ಅಧ್ಯಕ್ಷರಾದ ಅಭಿನಂದನ್ ಪಾಟೀಲ್, ಮುಖಂಡರಾದ ಡಾ.ಶಿದ್ದಗೌಡ ಕಾಗೆ, ಮಹಾವೀರ್ ಕಾತ್ರಾಳೆ, ಅಣ್ಣಾಸಾಬ ಪಾಟೀಲ, ಅಭಯಕುಮಾರ ಅಕಿವಾಟೆ, ಸುರೇಶ್ ಪಾಟೀಲ, ಶಿವಾನಂದ್ ಪಾಟೀಲ, ದೀಪಕ ಪಾಟೀಲ, ಆರ್.ಎಸ್. ಪಾಟೀಲ, ಅರಣ್ ಗಣೇಶವಾಡಿ,ಅಶೋಕ ಕಾತ್ರಾಳೆ, ವಿಜಯ್ ಅಕಿವಾಟೆ, ಅಪ್ಪಾಸಾಬ ಚೌಗುಲೆ, ದಯಾನಂದ್ ಮಿಣಚೆ, ನಂದು ಪಾಟೀಲ್, ಅಮರ್ ಯಾದವ್, ಅರುಣ್ ಕುರುಂದವಾಡೆ, ಅನೀಲ ಚೌಗುಲೆ, ಅರುಣ ಶಿರಗುಪ್ಪೆ, ಶಂಕರ್ ಪವಾರ್, ಬಾಬಾಸಾಬ್ ಜುಗೂಳೆ, ಋಷಭ ಡಿಗ್ರಜೆ, ಚಂದ್ರಕಾಂತ್ ಲಂಗೋಟೆ, ರವೀಂದ್ರ್ ಬೋಜೆ, ಅಶೋಕ್ ಮಿರ್ಜೆ, ಸಾಗರ್ ಅರಬೋಳೆ, ಸಂತೋಶ್ ಚೌಗುಲೆ, ಸಿಇಓ ಅಶೋಕ್ ಬಂಕಾಪೂರೆ, ಉಪಾಧ್ಯಕ್ಷರಾದ ಸತೀಶ್ ಪಾಟೀಲ್, ಶಾಖಾ ವ್ಯವಸ್ಥಾಪಕ ಬಾಹು ಬಲಿ ಮೊನೆ ಸೇರಿದಂತೆ ಸಂಸ್ಥೆಯ ಎಲ್ಲ ಸಂಚಾಲಕರು, ಶಾಖೆಯ ಸಲಹಾ ಸಮಿತಿ ಯ ಸದಸ್ಯರು, ಸಿಬ್ಬಂದಿ ವರ್ಗದ ವರು, ಹಿತೈಷಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.



ಮೋಳೆ: ಶಿರಗುಪ್ಪಿ ಗ್ರಾಮದಲ್ಲಿ ಬೋರಗಾಂವದ ಶ್ರೀ ಅರಿಹಂತ್ ಕೋ–ಆಪ್‌ರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್ ಮಲ್ಟಿಸ್ಟೆಟ್ ಸಂಸ್ಥೆಯ 62 ನೇ ಶಾಖೆಯನ್ನು ಉತ್ತಮಅಣ್ಣಾ ಪಾಟೀಲ್ ಉದ್ಘಾಟಿಸುತ್ತಿರುವ ಚಿತ್ರ.

## ನಾಳೆ ಸ್ನೇಹಿತರ ಪುನರ್ ಮಿಲನ ಹಾಗೂ ಗುರುಗಳಿಗೆ ಗೌರವ ನಮನ ಕಾರ್ಯಕ್ರಮ



**ಗೋಕಾಕ: ಸರಕಾರಿ ಹೊಸ ಮಾಧ್ಯಮಿಕ ಶಾಲೆ(ಜೆಎನ್‌ಎಸ್) ಗೋಕಾಕ.**

**ಬೆಳಗಾವಿ ವಾರ್ತೆ ಗೋಕಾಕ:** ಸರಕಾರಿ ಹೊಸ ಮಾಧ್ಯಮಿಕ ಶಾಲೆ(ಜೆಎನ್‌ಎಸ್) ಗೋಕಾಕ ಸನ್ 2002–03ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಂದ ಗುರುಗಳಿಗೆ ಗೌರವ ನಮನ ಹಾಗೂ 23ನೇ ವರ್ಷದ ಸ್ನೇಹಿತರ ಪುನರ್ ಮಿಲನದ ಕಾರ್ಯಕ್ರಮ ಇದೆ ದಿ.17ರಂದು ನಗರದ ಸ್ಪೈಸ್ ಗಾರ್ಡನನಲ್ಲಿ ಜರುಗಲಿದೆ.

ಬೆಳಿಗ್ಗೆ 7.45ಕ್ಕೆ ಸರಕಾರಿ ಹೊಸ ಮಾಧ್ಯಮಿಕ ಶಾಲೆ(ಜೆಎನ್‌ಎಸ್) ಶಾಲೆಗೆ ಭೇಟಿ ನೀಡಿ ಮರು ನೆನಪಿನ ತರಗತಿಯಲ್ಲಿ ಪಾಲ್ಗೊಳ್ಳುವದು. 9.30ಕ್ಕೆ ಉಪಾಹಾರ, ಸಮೂಹ ಭಾವಚಿತ್ರ, ಬೆಳಿಗ್ಗೆ 11.30 ಗಂಟೆಗೆ ವೇದಿಕೆ ಕಾರ್ಯಕ್ರಮ, ಸರಸ್ವತಿ ಪೂಜೆ, ಗುರು ವಂದನೆ, ಶಿಕ್ಷಕರ ಅನಿಸಿಕೆ ಕಾರ್ಯಕ್ರಮ ಜರುಗಲಿವೆ. ಮಧ್ಯಾಹ್ನ 1.30ಕ್ಕೆ ಭೋಜನ ನಡೆಯಲಿದೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ, ಸರಕಾರಿ ಹೊಸ ಮಾಧ್ಯಮಿಕ ಶಾಲೆ(ಜೆಎನ್‌ಎಸ್) ಗೋಕಾಕ ಸನ್ 2002–03ನೇ ಸಾಲಿನ ಶಿಕ್ಷಕ ವೃಂದ, ಶಿಕ್ಷಕೇತರ ಸಿಬ್ಬಂಧಿ ಭಾಗವಹಿಸಲಿದ್ದಾರೆ.

## ಶಕ್ತಿಪ್ರದರ್ಶನ ಮಾಡಿ ಗ್ರಾಮಸ್ಥರಿಂದ ಭೇಶ್ ಎನಿಸಿಕೊಂಡ ಸರಸ್ವತಿ ಗೌಡಪ್ಪ ಪಡಸುಣಗಿ



ಉಗರಗೋಳ ಗ್ರಾಮದ 9ನೇ ತರಗತಿಯ ವಿಧ್ಯಾರ್ಥಿನಿ ಕುಮಾರಿ, ಸರಸ್ವತಿ ಗೌಡಪ್ಪ ಪಡಸುಣಗಿ, ಇವಳು 1.10 ಕ್ವಿಂಟಲ್ ಜೋಳದ ಚೀಲವನ್ನು ಹೊತ್ತಿರುವದು.

**ಬೆಳಗಾವಿ ವಾರ್ತೆ ಉಗರಗೋಳ:** ಸವದತ್ತಿ ತಾಲೂಕಿನ ಉಗರಗೋಳ ಗ್ರಾಮದ ಡಾ, ಬಾಬಾ ಸಾಹೇಬ ಅಂಬೇಡ್ಕರ ವಸತಿ ಶಾಲೆಯ 9ನೇ ತರಗತಿಯ ವಿಧ್ಯಾರ್ಥಿನಿ ಕುಮಾರಿ, ಸರಸ್ವತಿ ಗೌಡಪ್ಪ ಪಡಸುಣಗಿ, ಇವಳು ಗ್ರಾಮದಲ್ಲಿ ಬುಧವಾರ ರಂದು ಸಂಜೆ 1.10.ಕ್ವಿಂಟಲ್ ಜೋಳದ ಚೀಲವನ್ನು ಹೊತ್ತು ಗ್ರಾಮದ ಸುಮಾರು 10ಕ್ಕೂ ಹೆಚ್ಚು ದೇವಸ್ಥಾನಗಳ ಮುಂದೆ ದೀಡ ನಮಸ್ಕಾರ ಹಾಕುವ ಮೂಲಕ ತನ್ನ ಶಕ್ತಿಪ್ರದರ್ಶನವನ್ನು ಮಾಡಿ ಗ್ರಾಮಸ್ಥರಿಂದ ಭೇಶ್ ಎನಿಸಿಕೊಂಡಳು. ಈ ಯುಗದಲ್ಲಿ ಹೆಣ್ಣುಮಕ್ಕಳು ಯಾವು ದರಲ್ಲಿ ಕಡಿಮೆ ಇಲ್ಲ, ಎಲ್ಲ ವಿಭಾಗದ ಲ್ಲಿಯೂ ಕೂಡ ಮುಂದೆ ಇದ್ದಾರೆ ನಾನು ಏಕೆ ಈ ಸಾಧನೆ ಮಾಡಬಾರದೆಂದು ಕೊಂಡು ಈ ಸಾಧನೆ ಮಾಡುತಿದ್ದೇನೆ. ಸರ್ಕಾರ ದೇಸಿ ಕ್ರೀಡೆ ಉಳಿವಿಗೆ ಇನ್ನಷ್ಟು ಮಹತ್ವದ ಹೆಜ್ಜೆ ಇಡಬೇಕು ಎಂದು ಸರಸ್ವತಿ ಗೌಡಪ್ಪ ಪಡಸುಣಗಿ ಹೇಳಿದರು. ಈ ಸಣ್ಣ ಹಳ್ಳಿಯಿಂದ ಸುಮಾರು ವಿದ್ಯಾರ್ಥಿ–ವಿಧ್ಯಾರ್ಥಿನಿಯರು ಹಾಗೂ ಹಲವಾರು ಪ್ರತಿಭೆಗಳು ಭಾರ ಎತ್ತುವ ಶಕ್ತಿಪ್ರದರ್ಶನದಂತಾ ಆಟಗಳನ್ನು ಕಲಿಯುತ್ತಾ ಮಿಂಚುತ್ತಿರುವುದು ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ. ದೇವೇಂದ್ರಪ್ಪ ಪಡಸುಣಗಿ, ಬಸನಪ್ಪ ಅಳಗೋಡಿ, ವಾಯ್ ವಾಯ್ ಕಾಳಪ್ಪನವರ, ಗೌಡಪ್ಪ ಪಡಸುಣಗಿ, ಉಮೇಶ ಹೊಸಮನಿ, ಮಹೇಶ ಗೊರವನಕೊಳ್ಳ, ಅಪ್ಪು ಕಾಳಪ್ಪನವರ, ಮಾರುತಿ ಪಡಸುಣಗಿ, ರಾಜನಗೌಡ ಮರಿಗೌಡ್ರ, ರೇಣಪ್ಪ ಗುಡೆಣ್ಣವರ, ಬಸು ಬಾವಲಿ, ಕರೆಪ್ಪ ಅಳಗೋಡಿ, ಫಕ್ಕೀರಪ್ಪ ಒಕ್ಕುಂದ, ಹಾಲಪ್ಪ ಕರಲಿಂಗನವರ, ಕರೆಪ್ಪ ಶಿದ್ದಕ್ಕನ್ನವರ ಹಾಗೂ ಗ್ರಾಮಸ್ಥರು ಇದ್ದರು.

# ಶ್ರೀ ಗದ್ದೇಮ್ಮದೇವಿ ಹಾಗೂ ಶ್ರೀ ದ್ಯಾಮವ್ವದೇವಿ ಅದ್ದೂರಿ ಜಾತ್ರೆ

## ಚವನಭಾವಿಯಲ್ಲಿ ಭಕ್ತಿ ಪರವಶ: ಗದ್ದೇಮ್ಮದೇವಿ – ದ್ಯಾಮವ್ವದೇವಿಯರ ಭಾವುಕ ಮಿಲನ



**ಬೆಳಗಾವಿ ವಾರ್ತೆ ಮುದ್ದೇಬಿಹಾಳ:** ತಾಲೂಕಿನ ಚವನಭಾವಿ ಗ್ರಾಮದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಜರುಗುವ ಅತ್ಯಂತ ಅಪರೂಪದ ಧಾರ್ಮಿಕ ಸಂಪ್ರದಾಯ ವಾದ ಶ್ರೀ ಗದ್ದೇಮ್ಮದೇವಿ ಹಾಗೂ ಶ್ರೀ ದ್ಯಾಮವ್ವದೇವಿ ದೇವಿಯರ ಸಮಾಗಮ ಮತ್ತು ಬೀಳ್ಕೊಡುಗೆ ಸಮಾರಂಭವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ಅದ್ದೂರಿಯಾಗಿ ನೆರವೇರಿತು.

ಗ್ರಾಮದ ಪುರಾತನ ಪದ್ಧತಿಯಂತೆ ಪ್ರತಿ ಮೂರು ವರ್ಷಕ್ಕೊಮ್ಮೆ ಈ ಉಭಯ ದೇವಿಯರ ಭೇಟಿ ಜರುಗುತ್ತದೆ.

ಈ ಬಾರಿಯೂ ಸಹ ಭಕ್ತರು ಸಕಲ ಸಿದ್ಧತೆಗಳೊಂದಿಗೆ ದೇವಿಯರ ಉತ್ಸವಕ್ಕೆ ಚಾಲನೆ ನೀಡಿದ್ದರು. ಗ್ರಾಮದ ಗಡಿಯಿಂದ ಆರಂಭವಾದ ಈ ಮೆರವಣಿಗೆಯು ಭಕ್ತಿಯ ಪರಾಕಾಷ್ಠೆಯನ್ನು ತಲುಪಿತ್ತು.

ಮೆರವಣಿಗೆಯುದ್ದಕ್ಕೂ ಡೊಳ್ಳು ಕುಣಿತ ಮತ್ತು ವಿವಿಧ ಜಾನಪದ ವಾದ್ಯಗಳ ಮೇಳಗಳು ಭಕ್ತರಲ್ಲಿ ಸಂಭ್ರಮದ ಅಲೆ ಎಬ್ಬಿಸಿದವು. ಸುಮಂಗಲೆಯರು ಸಾಲಾಗಿ ನಿಂತು ದೇವಿಯರಿಗೆ ಆರತಿ ಬೆಳಗಿ, ಕಂಕಣ ಅರ್ಪಿಸಿ ಭಕ್ತಿ ಸಮರ್ಪಿಸಿದರು. ಹಳದಿ ಮತ್ತು ಕೇಸರಿ ಪೇಟಗಳನ್ನು ಧರಿಸಿದ ಯುವಕರ "ಜೈಕಾರ" ಗ್ರಾಮದ ತುಂಬೆಲ್ಲಾ ಪ್ರತಿಧ್ವನಿಸಿತು. ದೇವಿಯರ ಉತ್ಸವ ಮೂರ್ತಿಗಳನ್ನು ಹೂವುಗಳಿಂದ ಸುಂದರವಾಗಿ ಅಲಂಕರಿಸಲಾಗಿತ್ತು.

ಈ ಕಾರ್ಯಕ್ರಮದ ಅತ್ಯಂತ ಪ್ರಮುಖ ಮತ್ತು ಭಾವುಕ ಘಟ್ಟವೆಂದರೆ ಅದು ಗದ್ದೇಮ್ಮದೇವಿ ಮತ್ತು ದ್ಯಾಮವ್ವದೇವಿಯರ ಮಿಲನ. ಇಬ್ಬರು ದೇವಿಯರು ಪರಸ್ಪರ ಜೊತೆಗೆ ಅಪ್ಪಿಕೊಳ್ಳುವ ಕ್ಷಣವನ್ನು ನೋಡಲು ಭಕ್ತರು ಮುಗಿಬಿದ್ದಿದ್ದರು. ಈ ಅಪರೂಪದ ಸಮಾಗಮದ ನಂತರ, ದ್ಯಾಮವ್ವದೇವಿಯು ಅಡವಿ ಹುಲಗಬಾಳ ಗ್ರಾಮದತ್ತ ಪ್ರಯಾಣ ಬೆಳೆಸಿದರು. ಶ್ರೀ ಗದ್ದೇಮ್ಮದೇವಿಯು ಗ್ರಾಮದ ಆಂಜನೇಯ ದೇವಸ್ಥಾನದಲ್ಲಿ ವಾಸ್ತವ್ಯ ಹೂಡಿದರು ಭಕ್ತರು ದೇವಿಯ ಆಶೀರ್ವಾದಗಳನ್ನು ಪಡೆದರು. ಗುರುವಾರ ಸಂಜೆ ನಡೆದ ಈ ಅಂತಿಮ ಘಟ್ಟದ ಮೆರವಣಿಗೆಯಲ್ಲಿ ಚವನ ಭಾವಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಸಹಸ್ರಾರು ಭಕ್ತಾದಿಗಳು ಪಾಲ್ಗೊಂಡಿದ್ದರು. ಪುರುಷರು, ಮಹಿಳೆಯರು ಹಾಗೂ ಮಕ್ಕಳು ಎನ್ನದೆ ಪ್ರತಿಯೊಬ್ಬರೂ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ದೇವಿಯರ ಕೃಪೆಗೆ ಪಾತ್ರರಾದರು.

ಈ ಸಂದರ್ಭದಲ್ಲಿ ಗ್ರಾಮದ ದೈವ ಮಂಡಳಿಯ ಹಿರಿಯರು ಯುವಕರು ವ್ಯವಸ್ಥಿತವಾಗಿ ಮೆರವಣಿಗೆಯನ್ನು ನಡೆಸಿಕೊಟ್ಟರು. ಒಟ್ಟಾರೆಯಾಗಿ, ಈ ಮೂರು ವರ್ಷಕ್ಕೊಮ್ಮೆ ಬರುವ ಸಂಭ್ರಮವು ಚವನಭಾವಿ ಗ್ರಾಮದಲ್ಲಿ ಹಬ್ಬದ ವಾತಾವರಣವನ್ನು ನಿರ್ಮಿಸಿತ್ತು.

# ಅಂತರ ಕಾಲೇಜ್ ಕ್ರೀಡಾಕೂಟ: ಬಿಎಲ್‌ಡಿಇ ವಿದ್ಯಾರ್ಥಿಗಳ ಉತ್ತಮ ಪ್ರದರ್ಶನ




**ಬೆಳಗಾವಿ ವಾರ್ತೆ ವಿಜಯಪುರ:** ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ ಹಾಗೂ ಅಲೈಡ್ ಹೆಲ್ತ್ ಸೈನ್ಸಸ್ ವಿಭಾಗದ ವಿದ್ಯಾರ್ಥಿಗಳು ಪುಣೆಯ ಆರ್ಮ್ಡ್ ಫೋರ್ಸಸ್ ಮೆಡಿಕಲ್ ಕಾಲೇಜಿನಲ್ಲಿ ಮೇ 6ರಿಂದ 9ರವರೆಗೆ ಆಯೋಜಿಸಲಾದ ಸಿಲ್ಹೌಟ್ಟೀಸ್–2026(SILHOUETTES 2026) ಅಂತರ ಕಾಲೇಜು ಕ್ರೀಡಾಕೂಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ವಿಶ್ವವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.

ಈ ಕ್ರೀಡಾಕೂಟದಲ್ಲಿ ವಿಶ್ವವಿದ್ಯಾಲಯದ ಒಟ್ಟು 44 ವಿದ್ಯಾರ್ಥಿಗಳ ತಂಡ ಅಥ್ಲೆಟಿಕ್ಸ್, ಕ್ರಿಕೆಟ್, ಫುಟ್‌ಬಾಲ್ ಹಾಗೂ ವಾಲಿಬಾಲ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದೆಮ

ಅಥ್ಲೆಟಿಕ್ಸ್ ವಿಭಾಗದ ರಿಲೇ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದು, ಮೂರು ವಿಭಾಗಗಳಲ್ಲಿ ಬೆಳ್ಳಿ ಪದಕ ಗೆದ್ದು ವಿಶ್ವವಿದ್ಯಾಲಯಕ್ಕೆ ಹೆಮ್ಮೆ ತಂದಿದ್ದಾರೆ.

4100 ಮೀಟರ್ ರಿಲೇ ಮಹಿಳಾ ವಿಭಾಗದಲ್ಲಿ ದ್ವಿತೀಯ ಸ್ಥಾನ

ಡೆಲಿಲಾ, ಸುಹಾನಿ, ತೇಜಸ್ವಿನಿ ಹಾಗೂ ರೇಖಾ ಅವರನ್ನೊಳಗೊಂಡ ತಂಡ ಉತ್ತಮ ಸಾಧನೆ ಮಾಡಿದೆ. ಇದೇ ವೇಳೆ 4400 ಮೀಟರ್ ರಿಲೇ ಪುರುಷರ ವಿಭಾಗದಲ್ಲಿ

ಮಿಥಾನ್ಶು ಪಾಟೀಲ, ಹರ್ಷ, ಪದ್ಮೇಶ್ ಪಾಟೀಲ ಹಾಗೂ ವಿಜಯ ಲಾಂಡೆ ಅವರನ್ನೊಳಗೊಂಡ ತಂಡ ದ್ವಿತೀಯ ಸ್ಥಾನ ಪಡೆದಿದೆ. 4100 ಮೀಟರ್ ರಿಲೇ ಪುರುಷರ ವಿಭಾಗದಲ್ಲಿ

ಮಿಥಾನ್ಶು ಪಾಟೀಲ, ಹರ್ಷ, ಪದ್ಮೇಶ್ ಪಾಟೀಲ್ ಹಾಗೂ ಪ್ರಣವ ಅವರನ್ನೊಳಗೊಂಡ ತಂಡ ದ್ವಿತೀಯ ಸ್ಥಾನ ಪಡೆದು ಗಮನ ಸೆಳೆದಿದೆ.

ವಿದ್ಯಾರ್ಥಿಗಳ ಈ ಸಾಧನೆಗೆ ಡೀಮ್ಡ್ ವಿವಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಅರುಣ ಚಂ. ಇನಾಮದಾರ, ಕುಲಸಚಿವ ರಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ, ವೈದ್ಯಕೀಯ ವಿಭಾಗದ ಡೀನ್ ಹಾಗೂ ಪ್ರಾಚಾರ್ಯೆ ಡಾ. ತೇಜಸ್ವಿನಿ ವಲ್ಲಭ, ಅಲೈಡ್ ಹೆಲ್ತ್ ಸೈನ್ಸಸ್ ವಿಭಾಗದ ಡೀನ್ ಡಾ. ಎಸ್. ವಿ. ಪಾಟೀಲ, ವಿದ್ಯಾರ್ಥಿ ಕಲ್ಯಾಣ ಹಾಗೂ ಕ್ರೀಡಾ ವಿಭಾಗದ ಡೀನ್ ಡಾ. ಗಿರೀಶ ಕುಲ್ಲೊಳ್ಳಿ ಹಾಗೂ ಕ್ರೀಡಾ ವಿಭಾಗದ ಸಹಾಯಕ ನಿರ್ದೇಶಕಿ ಡಾ. ಮಹಾದೇವಿ ವಾಲಿ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ವಿದ್ಯಾರ್ಥಿಗಳಿಗೆ ನಿರಂತರ ಪ್ರೊ???ತ್ಸಾಹ, ಮಾರ್ಗದರ್ಶನ ಹಾಗೂ ಬೆಂಬಲ ನೀಡಿದ ಪರಿಣಾಮ ಈ ಸಾಧನೆ ಸಾಧ್ಯವಾಗಿದ್ದು, ಈ ಯಶಸ್ಸು ವಿಶ್ವವಿದ್ಯಾಲಯದ ಕ್ರೀಡಾ ಪರಂಪರೆಯನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ದಿದೆ ಎಂದು ಅವರು ಅವರು ತಿಳಿಸಿದ್ದಾರೆ.

# ಕನ್ನಡವು ಕಡ್ಡಾಯವಾಗಿ ಅನ್ನದ ಭಾಷೆಯಾಗಲಿ: ಹಾಸಿಂಪೀರ ವಾಲಿಕಾರ




**ಬೆಳಗಾವಿ ವಾರ್ತೆ ಮುದ್ದೇಬಿಹಾಳ:** ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ ಎಂಬಂತೆ ಕನ್ನಡ ಭಾಷೆಯು ಶ್ರೀಮಂತವಾಗಬೇಕು. ಕನ್ನಡವು ಕೇವಲ ಮಾತನಾಡುವ ಭಾಷೆಯಾಗಿ ಉಳಿಯದೆ ಕಡ್ಡಾಯವಾಗಿ ಅನ್ನ ನೀಡುವ ಭಾಷೆಯಾಗಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಹಾಸಿಂಪೀರ ವಾಲಿಕಾರ ಅವರು ಅಭಿಪ್ರಾಯಪಟ್ಟರು.

ಇಲ್ಲಿನ ಪಟ್ಟಣದ ಸರ್ಕಾರಿ ವಸತಿ ಸಭಾಂಗಣದಲ್ಲಿ (ಐ.ಬಿ) ಸಾಂಕೇತಿಕವಾಗಿ ಜರುಗಿದ ಕಸಾಪದ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಪರಿಷತ್ತಿನ ಸಂಸ್ಥಾಪಕ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಅವರು ಮಾತನಾಡುತ್ತಿದ್ದರು.

ನೆರೆಯ ರಾಜ್ಯಗಳ ಪ್ರಭಾವದಿಂದ ಕನ್ನಡ ಭಾಷಿಕರ ಸಂಖ್ಯೆ ಕ್ಷೀಣಿಸುತ್ತಿರುವುದು ಕಳವಳಕಾರಿ ಸಂಗತಿ. ಕನ್ನಡ ಸಾಹಿತ್ಯ ಪರಿಷತ್ತು ನಾಡು, ನುಡಿ, ನೆಲ, ಜಲ ಹಾಗೂ ಸಂಸ್ಕೃತಿಯನ್ನು ಉಳಿಸುವ ಸರ್ಕಾರದ ಪ್ರಾತಿನಿಧಿಕ ಸಂಸ್ಥೆಯಾಗಿದ್ದು, ಎಲ್ಲರೂ ಸೇರಿ ಈ ಪರಂಪರೆಯನ್ನು ಬೆಳೆಸುವ ಪ್ರಾಮಾಣಿಕ ಪ್ರಯತ್ನ ಮಾಡೋಣ ಎಂದು ವಾಲಿಕಾರ ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ವಿಜಯಪುರ ನಗರ ಘಟಕದ ಅಧ್ಯಕ್ಷೆ ಜಯಶ್ರೀ ಹಿರೇಮಠ ಮಾತನಾಡಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಲಭಿಸಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಎಂಟು ಜ್ಞಾನಪೀಠಗಳನ್ನು ಮುಡಿಗೇರಿಸಿಕೊಂಡ ಭಾಷೆ ನಮ್ಮದು. ಆದರೆ ಇಂಗ್ಲಿಷ್ ವ್ಯಾಮೋಹದಿಂದಾಗಿ ಮಾತೃಭಾಷೆ ಓದುವವರ ಸಂಖ್ಯೆ ಕುಸಿಯುತ್ತಿದೆ. ಕನ್ನಡವನ್ನು ಒಂದು ವಿಷಯವಾಗಿ ಕಡ್ಡಾಯವಾಗಿ ಅಧ್ಯಯನ ಮಾಡಲೇಬೇಕು," ಎಂದು ಒತ್ತಾಯಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಾಲೂಕು ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ ಮಾತನಾಡಿ, ಕನ್ನಡಿಗರಲ್ಲಿ ಸ್ವಾಭಿಮಾನ ಬೆಳೆಯಬೇಕು.

ಕನ್ನಡವನ್ನು ಆಡಳಿತ ಮತ್ತು ಅನ್ನದ ಭಾಷೆಯನ್ನಾಗಿ ಜಾರಿಗೆ ತರಲು ಸರ್ಕಾರ ಇನ್ನಷ್ಟು ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದರು. ಹಿರಿಯರಾದ ಬಸವರಾಜ ನಾಲತವಾಡ ಹಾಗೂ ಉದಯಕುಮಾರ ರಾಯಚೂರ ಮಾತನಾಡಿ, ಸಂಸ್ಥಾಪನಾ ದಿನವನ್ನು ಸರ್ಕಾರವೇ ಅಧಿಕೃತವಾಗಿ ಆಚರಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಸಭೆಯಲ್ಲಿ ಸದಾಶಿವ ಮಠ ಸ್ವಾಗತಿಸಿದರು, ಬಸನಗೌಡ ಪಾಟೀಲ ಸರೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಂದ್ರು ಬಾಲಾಜಿ ಅವರಿಂದ ಪ್ರಾರ್ಥನೆ ಜರುಗಿತು. ಹುಸೇನ ಮುಲ್ಲಾ ನಿರೂಪಿಸಿದರೆ, ಸುರೇಶ ಸಿಂದೆ ವಂದನಾರ್ಪಣೆ ಮಾಡಿದರು.

# ಹತ್ತಕ್ಕಿಂತ ಹೆಚ್ಚು ದುಡಿಯುವ ಮಹಿಳೆಯರು ಇರುವ ಸರಕಾರಿ, ಖಾಸಗಿ ಕಚೇರಿ, ಕೈಗಾರಿಕೆಗಳಲ್ಲಿ ತುರ್ತಾಗಿ ಶೀ ಬಾಕ್ಸ್ (She Box) ಅಳವಡಿಸಿ: ಜಿಲ್ಲಾಧಿಕಾರಿ ಸ್ನೇಹಲ್ ಆರ್.

**ಬೆಳಗಾವಿ ವಾರ್ತೆ ಧಾರವಾಡ:** ಯಾವುದೇ ಸರಕಾರಿ ಖಾಸಗಿ ಕಚೇರಿಗಳು ಮತ್ತು ಕೈಗಾರಿಕೆಗಳಲ್ಲಿ ಹತ್ತು ಮತ್ತು ಹತ್ತಕ್ಕಿಂತ ಹೆಚ್ಚು ದುಡಿಯುವ ಮಹಿಳೆಯರು ಇದ್ದಲ್ಲಿ ಕಡ್ಡಾಯವಾಗಿ ಮತ್ತು ತುರ್ತಾಗಿ ಶೀ ಬಾಕ್ಸ್ (ಖಜ ಃಂಥ) ಅಳವಡಿಸಬೇಕು. ಅಲ್ಲಿನ ಮಹಿಳೆಯರು ತಮಗೆ ಲೈಂಗಿಕ ದೌರ್ಜನ್ಯ ಲೈಂಗಿಕ ಕಿರುಕುಳ ಉಂಟಾದರೆ ಶೀ ಬಾಕ್ಸ್‌ದಲ್ಲಿ ಹಾಕಬೇಕು. ಹತ್ತು ಮತ್ತು ಹತ್ತಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಇದ್ದರೆ, ಅವರು ಜಿಲ್ಲಾ ಆಂತರಿಕ ಮಹಿಳಾ ದೂರು ಸಮಿತಿಗೆ ತಮ್ಮ ದೂರು ಸಲ್ಲಿಸಬಹುದು. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆ–2013 ನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ನಿಷೇಧ ಕಾಯ್ದೆಯ ಜಿಲ್ಲಾಮಟ್ಟದ ಸಮನ್ವಯ ಸಮಿತಿ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಹೇಳಿದರು.

ಅವರು ಇಂದು (ಮೇ.14) ಮಧ್ಯಾಹ್ನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಯೋಜಿಸಿದ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಕಾಯ್ದೆ 2013 ಅನುಷ್ಠಾನ ಕುರಿತು ಪ್ರಗತಿ ಪರಿಶೀಲನಾ ಸಭೆ ಜರುಗಿಸಿ, ಮಾತನಾಡಿದರು.

ಪೋಶ್ (POSH) ಕಾಯ್ದೆ 2013ಕ್ಕೆ ಸಂಬಂಧಿಸಿದಂತೆ ಸ್ಥಳೀಯ ದೂರು ಸಮಿತಿಯನ್ನು ರಚಿಸಲಾಗಿದೆ. ಮತ್ತು ಈ ಮಾಹಿತಿಯನ್ನು ಶೀ ಬಾಕ್ಸ್ ಪೋರ್ಟಲ್ ಅಳವಡಿಸಲಾಗಿದೆ. ಜಿಲ್ಲೆಯ 66 ಕಚೇರಿಗಳಲ್ಲಿ ಹತ್ತು, ಹತ್ತಕ್ಕಿಂತ ಹೆಚ್ಚು ಮಹಿಳಾ ಸಿಬ್ಬಂದಿಗಳು ಇದ್ದು, ಆಂತರಿಕ ದೂರು ಸಮಿತಿಗಳನ್ನು ರಚಿಸಲಾಗಿದೆ. 1408 ತಾಲೂಕು ಕಚೇರಿಗಳಲ್ಲಿಯೂ ಆಂತರಿಕ ದೂರು ಸಮಿತಿಯನ್ನು ಸೃಜಿಸಲಾಗಿದೆ. ಇದರಲ್ಲಿ 928 ಕಚೇರಿಗಳ ವಿವರಗಳನ್ನು ಶೀ ಬಾಕ್ಸ್‌ದಲ್ಲಿ ಅಳವಡಿಸಿದ್ದು, 480 ಕಚೇರಿಗಳ ಮಾಹಿತಿ ಅಳವಡಿಕೆ ಪ್ರಗತಿಯಲ್ಲಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಸಭೆಯಲ್ಲಿ ಹೇಳಿದರು.

391 ಖಾಸಗಿ ಕಚೇರಿಗಳ ಮಾಹಿತಿಯನ್ನು ಪೋರ್ಟಲ್‌ದಲ್ಲಿ ಅನುಮೋದಿಸಲಾಗಿದೆ. 314 ಕಚೇರಿಗಳು ತಮ್ಮ ಕಚೇರಿಯಲ್ಲಿನ ಆಂತರಿಕ ದೂರು ಸಮಿತಿಯ ಮಾಹಿತಿಯನ್ನು ಅಳವಡಿಸುವುದು ಬಾಕಿ ಇದೆ. ಕಾಯ್ದೆಯ ಸಮಗ್ರ ಅನುಷ್ಠಾನಕ್ಕಾಗಿ ಸರಕಾರದ ಆದೇಶದಂತೆ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ, ತಾಲೂಕು ಮಟ್ಟದಲ್ಲಿ ತಹಸಿಲ್ದಾರರ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿಗಳನ್ನು ರಚಿಸಿ, ಸಮಿತಿಗಳ ಸಭಾ ಪ್ರಗತಿಯನ್ನು ಪರಿಶೀಲಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಸಂಬಂಧಿಸಿದಂತೆ ದೂರುಗಳನ್ನು ಪರಿಶೀಲಿಸಲು ಕಚೇರಿಗಳಲ್ಲಿ ಅಳವಡಿಸಿರುವ ಶೀ ಬಾಕ್ಸ್‌ಗಳನ್ನು ಪ್ರತಿ ವಾರಕ್ಕೊಮ್ಮೆ ತೆರೆದು ನೋಡಬೇಕು. ಮಹಿಳೆಯರಿಗೆ ಕೆಲಸದ ಸ್ಥಳದಲ್ಲಿ ಪೂರಕ ವಾತಾವರಣ ರೂಪಿಸಲು ಬದ್ಧರಾಗಿರಬೇಕು. ದೂರುಗಳು ಬಂದಲ್ಲಿ ಪಾರದರ್ಶಕವಾಗಿ ಮತ್ತು ಕಾನೂನಾತ್ಮಕವಾಗಿ ಪರಿಶೀಲಿಸಿ, ಕ್ರಮ ವಹಿಸಬೇಕು. ಹತ್ತಕ್ಕಿಂತ ಕಡಿಮೆ ಮಹಿಳಾ ಸಿಬ್ಬಂದಿಗಳಿದ್ದಲ್ಲಿ, ಆ ಕಚೇರಿಯಲ್ಲಿನ ಮಹಿಳೆಯರು ಜಿಲ್ಲಾ ಆಂತರಿಕ ದೂರು ಸಮಿತಿಗೆ ದೂರು ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಹೇಳಿದರು.

**ಜಿಲ್ಲಾಮಟ್ಟದ ಸಮನ್ವಯ ಸಮಿತಿ:** ಪೋಶ್ (POSH) ಕಾಯ್ದೆಯನ್ನು ಸಮಗ್ರವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯಕವಾಗುವಂತೆ ಕಾಯಿದೆಯಡಿ ಜಿಲ್ಲಾಮಟ್ಟದ ಸಮನ್ವಯ ಸಮಿತಿಯನ್ನು ರಚಿಸಲಾಗಿದೆ.

ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಜಿಲ್ಲಾಮಟ್ಟದ ಸಮನ್ವಯ ಸಮಿತಿಯಲ್ಲಿ ಸದಸ್ಯರಾಗಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್ ಸಿಇಓ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಜಂಟಿ ಕಾರ್ಯದರ್ಶಿ, ಜಿಲ್ಲಾ ಕಾರ್ಮಿಕ ಅಧಿಕಾರಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು, ಜಿಲ್ಲಾ ಆರೋಗ್ಯ ಅಧಿಕಾರಿ, ಕಾಲೇಜು ಶಿಕ್ಷಣ ಇಲಾಖೆ ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಮತ್ತು ಸಮಿತಿ ಸದಸ್ಯ ಕಾರ್ಯದರ್ಶಿಗಳಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಕಾರ್ಯ ನಿರ್ವಹಿಸುತ್ತಾರೆ.

ಸಮನ್ವಯ ಸಮಿತಿಯು ಜಿಲ್ಲಾಮಟ್ಟದಲ್ಲಿ ಸ್ಥಳೀಯ ದೂರು ಸಮಿತಿ ರಚಿಸಿ, ಆ ಸಮಿತಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಉಸ್ತುವಾರಿ ನೋಡಿಕೊಳ್ಳುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

**ಜಿಲ್ಲಾ ಮಟ್ಟದ ಸ್ಥಳೀಯ ದೂರು ಸಮಿತಿ:** ಧಾರವಾಡ ಜಿಲ್ಲೆಯ ಸ್ಥಳೀಯ ದೂರು ಸಮಿತಿಯನ್ನು ಡಾ. ಸಂಗೀತಾ ಮಾನೆ (ಮೊ.ನಂ:9880866796 angeethamane@gmail.com) ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಸದಸ್ಯರನ್ನಾಗಿ ಸುನಂದಾ ಯಕಂಚಿ (ಮೊ.ನಂ:9341829591, dddwdwcd@gmail.com), ಜ್ಯೋತಿ ಮುದಿಗೌಡರ (ಮೊ.ನಂ:7892414144, deputydirectordwd@rediffmail.com) ಮತ್ತು ಜಯಶ್ರೀ ಕೊರಿ (ಮೊ.ನಂ: 9481872366, dddwdwcd@gmail.com) ಅವರನ್ನು ನೇಮಿಸಲಾಗಿದೆ.

ಸರಕಾರಿ, ಅರೆ ಸರಕಾರಿ ಅಥವಾ ಖಾಸಗಿ ವಲಯದಲ್ಲಿ ಕರ್ತವ್ಯ ನಿರ್ವಹಿಸುವ 10 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿರುವ ಮಹಿಳಾ ಸಿಬ್ಬಂದಿಗಳು ಲೈಂಗಿಕ ಕಿರುಕುಳ ಅಥವಾ ಲೈಂಗಿಕ ದೌರ್ಜನ್ಯ ಉಂಟಾದರೆ ತಮ್ಮ ದೂರನ್ನು ಕಚೇರಿಯಲ್ಲಿನ ಶೀ ಬಾಕ್ಸ್ ಅಥವಾ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಚೇರಿಯಲ್ಲಿರುವ ಜಿಲ್ಲಾಮಟ್ಟದ ಸ್ಥಳೀಯ ದೂರು ಸಮಿತಿಗೆ ಲಿಖಿತವಾಗಿ ಅಥವಾ ಅಧ್ಯಕ್ಷ, ಸದಸ್ಯರ ಮೊಬೈಲ್ ನಂಬರ್‌ಗೆ ಕರೆ ಮಾಡಿ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಹೇಳಿದರು.

ಮುಂದಿನ ದಿನಗಳಲ್ಲಿ ಜಿಲ್ಲಾ ಹಾಗೂ ತಾಲೂಕು ಮಹಾನಗರ ಪಾಲಿಕೆ ವ್ಯಾಪ್ತಿಯ ಸಮನ್ವಯ ಸಮಿತಿ ಸಭೆ ಜರುಗಿಸಿ, ವರದಿ ಸಲ್ಲಿಸಬೇಕು. ಮಹಿಳೆಯರು ಯಾವುದೇ ತೊಂದರೆ, ಅವಮಾನ, ಕಿರಿಕಿರಿ ಅನುಭವಿಸದೆ, ನಿರ್ಭಯವಾಗಿ, ಸಂತೋಷದಿಂದ ಕೆಲಸ ಮಾಡುವ ವಾತಾವರಣವನ್ನು ಕೆಲಸದ ಸ್ಥಳದಲ್ಲಿ ನಿರ್ಮಿಸುವ ಜವಾಬ್ದಾರಿ ನಮ್ಮದಾಗಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ತಿಳಿಸಿದರು.



ಉಪನಿರ್ದೇಶಕಿ ಡಾ. ಎಚ್.ಎಚ್.ಕುಕನೂರ ಅವರು ಸ್ವಾಗತಿಸಿ, ಸಭೆ ನಿರ್ವಹಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಜಿಲ್ಲಾ ಮಟ್ಟದ ಸ್ಥಳೀಯ ದೂರು ಸಮಿತಿ ಅಧ್ಯಕ್ಷೆ ಡಾ. ಸುಜಾತಾ ಮಾನೆ ಸೇರಿದಂತೆ ಸಮಿತಿ ಸದಸ್ಯರು, ಪೊಲೀಸ್, ಕಂದಾಯ, ಕಾರ್ಮಿಕ, ಪಾಲಿಕೆ ಹಾಗೂ ಇತರ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

**ಶೀ–ಬಾಕ್ಸ್:** ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ ನಿಷೇಧ ಮತ್ತು ಪರಿಹಾರ) ಕಾಯ್ದೆ, 2013 ರ ನಿಬಂಧನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೆ ತರಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಕಳೆದ ವರ್ಷ ಶೀ–ಬಾಕ್ಸ್ ಪೋರ್ಟಲ್ ಅನ್ನು ಪ್ರಾರಂಭಿಸಿತು. ಈ ಪೋರ್ಟಲ್ ಸಾರ್ವಜನಿಕ, ಖಾಸಗಿ, ಸಂಘಟಿತ ಅಥವಾ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬ ಮಹಿಳಾ ಉದ್ಯೋಗಿಗೆ ತನ್ನ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ ದೂರುಗಳನ್ನು ದಾಖಲಿಸಲು ಮತ್ತು ಅದರ ಸ್ಥಿತಿಯನ್ನು ಪತ್ತೆಹಚ್ಚಲು ಸಹಾಯಕವಾಗಿದೆ.

**ಉದ್ದೇಶ:** ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ (ಕಔಖಊ) ಕಾಯ್ದೆ 2013 ರ ಅಡಿಯಲ್ಲಿ, ಮಹಿಳೆಯರು ತಮ್ಮ ದೂರುಗಳನ್ನು ಆನ್ಲೈನ್ನಲ್ಲಿ ಸಲ್ಲಿಸಲು ಅನುಕೂಲ ಮಾಡಿಕೊಡುವುದು.

**ಯಾರಿಗೆ ಅನ್ವಯಿಸುತ್ತದೆ:** ಸರ್ಕಾರಿ ಮತ್ತು ಖಾಸಗಿ ವಲಯ, ಸಂಘಟಿತ ಅಥವಾ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಎಲ್ಲಾ ಮಹಿಳೆಯರು ಈ ಪೋರ್ಟಲ್ ಬಳಸಬಹುದು.

**ದೂರು ನಿರ್ವಹಣೆ:** ಸಲ್ಲಿಕೆಯಾದ ದೂರುಗಳನ್ನು ನೇರವಾಗಿ ಸಂಬಂಧಪಟ್ಟ ಸಚಿವಾಲಯ ಅಥವಾ ಅಧಿಕಾರಿಗೆ ಕಳುಹಿಸಲಾಗುತ್ತದೆ.

**ಮೇಲ್ವಿಚಾರಣೆ:** ದೂರುದಾರರು ತಮ್ಮ ದೂರಿನ ಸ್ಥಿತಿಯನ್ನು ಆನ್‌ಲೈನ್‌ನಲ್ಲಿ ಮೇಲ್ವಿಚಾರಣೆ ಮಾಡಬಹುದು.

**ಕಡ್ಡಾಯ ನೋಂದಣಿ:** 10 ಅಥವಾ ಅದಕ್ಕಿಂತ ಹೆಚ್ಚು ನೌಕರರನ್ನು ಹೊಂದಿರುವ ಎಲ್ಲಾ ಖಾಸಗಿ ಸಂಸ್ಥೆಗಳು ಈ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ, ಶೀ–ಬಾಕ್ಸ್ ಪೋರ್ಟಲ್‌ನಲ್ಲಿ ನೊಂದಣಿಯಾಗದಿದ್ದರೆ ರೂ 50000 ದಂಡ ವಿಧಿಸಲಾಗುವುದು.



ಧಾರವಾಡ: ಇಂದು ಮಧ್ಯಾಹ್ನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಧು – ವರದಕ್ಷಿಣೆ ನಿಷೇಧ (ಕರ್ನಾಟಕ ನಿಗಮಗಳು) ಕುರಿತು ಬಿತ್ತಿಪತ್ರಗಳನ್ನು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ಅವರು ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಬಿತ್ತಿಪತ್ರ ಹಾಗೂ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಿದರು.

# ‘ಕುಚುಕು’ ಚಲನಚಿತ್ರ ಮೇ.22 ರಂದು ತೆರೆಗೆ



**ಬೆಳಗಾವಿ ವಾರ್ತೆ ಬೆಂಗಳೂರು :** ಶ್ರೀ ಚಾಮುಂಡೇಶ್ವರಿ ಪಿಕ್ಚರ್ ಬ್ಯಾನರ್ ಮೈಸೂರು ಅವರ ಸ್ನೇಹದ ಮಹತ್ವ ಸಾರುವ "ಕುಚುಕು" ಕನ್ನಡ ಚಲನಚಿತ್ರ ಇದೆ ಮೇ.22 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.

ಚಿತ್ರರಂಗದಲ್ಲಿ "ಕುಚುಕು" ಎಂಬ ಹೆಸರು ಕೇಳಿದೊಡನೆಯೇ ತಟ್ಟನೆ ನೆನಪಾಗುವುದು ಚಿತ್ರರಂಗದ ಮೇರು ನಟರಾದ ರೆಬೆಲ್ ಸ್ಟಾರ್ ಅಂಬರೀಷ್ ಹಾಗೂ ಸಾಹಸಸಿಂಹ ವಿಷ್ಣುವರ್ಧನ್ . ಅವರ ಸವಿ ನೆನಪಿನಲ್ಲಿ ನಿರ್ಮಾಣವಾದ ಸ್ನೇಹಿತರಿಬ್ಬರ ಬಾಂಧವ್ಯದ ಚಿತ್ರವೇ ಈ ‘ಕುಚುಕು’. ಕಾರವಾರ, ಹೊನ್ನಾವರ, ಮೈಸೂರು ಭಾಗಗಳಲ್ಲಿ ಸುಮಾರು ನಲವತ್ತೈದು ದಿನಗಳ ಕಾಲ ಸತತ ಚಿತ್ರೀಕರಣ ನಡೆಸಲಾಗಿದೆ, ಚಿತ್ರದಲ್ಲಿನ ಐದು ಹಾಡುಗಳಿಗೆ ನೃತ್ಯ ಸಂಯೋಜನೆಯನ್ನು ಚಿತ್ರದ ನಿರ್ದೇಶಕರೆ ನಿರ್ವಹಿಸಿದ್ದು, ನಾಲ್ಕು ಸಾಹಸ ದೃಶ್ಯಗಳನ್ನು ಮಾಸ್ ಮಾದ, ಹ್ಯಾರೀಶ್ ಜಾನಿ, ಪವರ್ ಪುಷ್ಪರಾಜ್ ಸಂಯೋಜಿಸಿದ್ದಾರೆ. ಚಿತ್ರದ ತಾರಾಗಣದಲ್ಲಿ ನಾಯಕ ನಟನಾಗಿ ಅರ್ಜುನ್ ಚವ್ಹಾಣ್, ಬಸವರಾಜ್ ಕುಮಾರ್, ನಾಯಕಿಯಾಗಿ ಪ್ರಿಯದರ್ಶಿನಿ , ಪೋಷಕ ಪಾತ್ರಗಳಲ್ಲಿ ಬಾಲರಾಜ್ ವಾಡಿ, ಶಂಕರ್ ಅಶ್ವಥ್, ರಮೇಶ್ ಪಂಡಿತ್, ಹನುಮಂತೇಗೌಡ್ರು, ಶಿವಾಜಿ, ಮಜಾ ಟಾಕೀಸ್ ಜಗ್ಗಪ್ಪ, ಕೈಲಾಶ್ ಕುಟ್ಟಪ್ಪ, ಯಶೋದಮ್ಮ, ಡ್ರಾಮಾ ಜೂನಿಯರ್ ಮಹೇಂದ್ರ, ಶಶಿಗೌಡ ಮೊದಲಾದವರಿದ್ದಾರೆ.

ಛಾಯಾಗ್ರಹಣ ರಾಮನಾಥ ರಾಜ್, ಸಂಕಲನ ಅರವಿಂದ್ ರಾಜ್, ಸಂಗೀತ ಎ ಟಿ ರವೀಶ್, ಹಿನ್ನೆಲೆ ಸಂಗೀತ ಸೂರಜ್, ಸಾಹಸ ಮಾಸ್ ಮಾದ, ಹ್ಯಾರೀಶ್ ಜಾನಿ, ಪವರ್ ಪುಷ್ಪ ರಾಜ್, ಸಂಭಾಷಣೆ ಹಾಗೂ ಸಹ ನಿರ್ದೇಶನ ರವಿಶಂಕರನಾಗ್, ಪಿಆರ್ ಓ ಸುಧೀಂದ್ರ ವೆಂಕಟೇಶ್, ಡಾ. ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ ಅವರಿದ್ದು.. ನಿರ್ದೇಶನ ಮೈಸೂರ್ ರಾಜು ಮಾಡಿದ್ದಾರೆ. ಶ್ರೀಮತಿ ನಾಗರತ್ನಮ್ಮ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಮನೆಮಂದಿಯೆಲ್ಲ ಕುಳಿತು ನೋಡುವ ಚಿತ್ರ ಇದಾಗಿದೆ ಎಂದು ನಿರ್ದೇಶಕ ಮೈಸೂರು ರಾಜು ತಿಳಿಸಿದ್ದಾರೆ.

–ಡಾ.ಪ್ರಭು ಗಂಜಿಹಾಳ
ಮೊ:9448775346

# ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಪ್ರಲ್ಹಾದ್ ಜೋಶಿ ಮನೆಗೆ ಮುತ್ತಿಗೆ ಯತ್ನ




**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ಹುಬ್ಬಳ್ಳಿ–ಧಾರವಾಡ ಮಹಾನಗರ ಯುವ ಕಾಂಗ್ರೆಸ್ ಘಟಕದ ಪದಾಧಿಕಾರಿಗಳು ಬುಧವಾರ ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಕೇಶ್ವಾಪುರದ ರಮೇಶ ಭವನ ಬಳಿ ಪ್ರತಿಭಟನೆ ನಡೆಸಿದರು.

ರಮೇಶ ಭವನದಿಂದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ನಿವಾಸದವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಿ, ಸಚಿವರ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ರಸ್ತೆಯಲ್ಲಿಯೇ ವಶಕ್ಕೆ ಪಡೆದು, ವ್ಯಾನ್‌ನಲ್ಲಿ ಕರೆದುಕೊಂಡು ಹೋಗಿ ನಂತರ ಬಿಡುಗಡೆ ಮಾಡಿದರು.

ಪ್ರತಿಭಟನೆ ವೇಳೆ ಯುವ ಕಾಂಗ್ರೆಸ್ ಘಟಕದ ಪದಾಧಿಕಾರಿಗಳು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ಅವರ ರಾಜೀನಾಮೆಗೆ ಒತ್ತಾಯಿಸಿದರು.

ವಿದ್ಯಾರ್ಥಿಗಳ ಭವಿಷ್ಯವನ್ನು ಕೇಂದ್ರ ಸರ್ಕಾರ ಹಾಳು ಮಾಡಿದೆ. ಇದು ದೇಶದಲ್ಲಿ ನಡೆದ ಬೃಹತ್ ಹಗರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ, ಹು–ಧಾ ಯುವ ಕಾಂಗ್ರೆಸ್ ಅಧ್ಯಕ್ಷ ಅರ್ಜುನ ಪಾಟೀಲ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ರಾಜೀನಾಮೆ ಕೊಡಬೇಕು.

ಅವರು ಸಚಿವರಾದ ನಂತರ ಎರಡನೇ ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಈ ರೀತಿ ಪ್ರಶ್ನೆ ಪತ್ರಿಕೆ ಸೋರಿಕೆಯಿಂದಾಗಿ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತಿದೆ ಎಂದರು.

# ಎಸ್‌ಎಸ್‌ಎಲ್‌ಸಿಯಲ್ಲಿ ತಾಲೂಕಿಗೆ 3ನೇ ಸ್ಥಾನ: ವಿದ್ಯಾರ್ಥಿ ಪ್ರಜ್ವಲಗೆ ಜಿಲ್ಲಾಡಳಿತದಿಂದ ಸನ್ಮಾನ

**ಬೆಳಗಾವಿ ವಾರ್ತೆ ಅಥಣಿ :** ತಾಲೂಕಿನ ಸಪ್ತಸಾಗರ ಶಾರ ದಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯ ವಿದ್ಯಾರ್ಥಿ ಪ್ರಜ್ವಲ ರಾವ ಸಾಬ ಬಮ್ಮಣ್ಣವರ ಅವರಿಗೆ ಬೆಳಗಾವಿ ಜಿಲ್ಲಾಡಳಿತದಿಂದ ಸನ್ಮಾನ ನಡೆಯಲಿದೆ.

2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಜ್ವಲ ರಾವಸಾಬ ಬಮ್ಮಣ್ಣವರ ಅವರು 625ಕ್ಕೆ 618 ಅಂಕ, ಅಂದರೆ ಶೇ 98.88% ಸಾಧನೆ ಮಾಡಿದ್ದಾರೆ. ಈ ಮೂಲಕ ಅಥಣಿ ತಾಲೂಕಿಗೆ 3ನೇ ಸ್ಥಾನ ಹಾಗೂ ಶೇಗುಣಸಿ ಪರೀಕ್ಷಾ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಈ ಹಿನ್ನೆಲೆಯಲ್ಲಿ ರವಿವಾರ ಮೇ 17ರಂದು ಬೆಳಗಾವಿಯ ಸುವರ್ಣ ಸೌಧದಲ್ಲಿ ಜಿಲ್ಲಾಡಳಿತ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಉಸ್ತುವಾರಿ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು, ಶಿಕ್ಷಣ ಇಲಾಖೆ ಉಪನಿರ್ದೇಶಕರು ಹಾಗೂ ಜಿಲ್ಲಾಮಟ್ಟದ ಎಲ್ಲ ಅಧಿಕಾರಿಗಳ ಸಮ್ಮುಖದಲ್ಲಿ ಪ್ರಜ್ವಲ ಅವರನ್ನು ಸನ್ಮಾನಿಸಲಾಗುತ್ತಿದೆ.

ವಿದ್ಯಾರ್ಥಿಯ ಈ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿ ಪರವಾಗಿ ಸಂಸ್ಥಾಪಕರಾದ ಡಿ.ಬಿ. ನದಾಫ್ ಅವರು ಹರ್ಷ ವ್ಯಕ್ತಪಡಿಸಿದ್ದಾರೆ. ಶಿಕ್ಷಕ ವೃಂದ, ಪಾಲಕರು, ಶಾರದಾ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳು ಹಾಗೂ ಸಮಸ್ತ ಸಪ್ತಸಾಗರ ಗ್ರಾಮಸ್ಥರು ಪ್ರಜ್ವಲ ಅವರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ.




# ನಿಗಮಕ್ಕೆ ಅಗತ್ಯ ಭೂಮಿ ಹಸ್ತಾಂತರಕ್ಕೆ ಡಿಸಿ ಭರವಸೆ



**ಬೆಳಗಾವಿ ವಾರ್ತೆ ವಿಜಯಪುರ:** ಬೇಸಿಗೆ ದಿನಗಳಲ್ಲಿ ಜನ–ಜಾನುವಾರುಗಳನ್ನು ನೀರಿನ ತಾಪತ್ರಯದಿಂದ ಪಾರು ಮಾಡಬೇಕು ಎಂಬ ದೂರದೃಷ್ಟಿಯೊಂದಿಗೆ ತಿಕೋಟಾ ತಾಲೂಕಿನ ಬಾಬಾನಗರದಲ್ಲಿ ನಿರ್ಮಾಣ ಗೊಳ್ಳಲಿರುವ ಜಲ ಸಂಗ್ರಹಗಾರ ನಿರ್ಮಾ ಣ ಸ್ಥಳಕ್ಕೆ ಜಿಲ್ಲಾಧಿಕಾರಿಗಳಾದ ಡಾ. ಆನಂ ದ ಕೆ. ಅವರು ಬುಧವಾರ ಭೇಟಿ ನೀಡಿ ಪರಿಶೀಲಿಸಿದರು.

ಕರ್ನಾಟಕ ನೀರಾವರಿ ನಿಗಮದಿಂದ 600 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಗೊಳ್ಳಲಿರುವ ಈ ಬೃಹತ್ ಜಲ ಸಂಗ್ರಹಗಾರ 0.70 ಟಿಎಂಸಿ ನೀರಿನ ಸಾಮರ್ಥ್ಯ ಹೊಂದಿದ್ದು, ಬಾಬಾನಗರ ಸೇರಿದಂತೆ ಸುತ್ತಲಿನ ಹಳ್ಳಿಗಳ ಜನತೆಗೆ ಬಿರು ಬೇಸಿಗೆಯಲ್ಲಿ ಜನ ಹಾಗೂ ಜಾನುವಾರುಗಳು ನೀರಿಗಾಗಿ ಪರದಾಡಬಾರದು ಎಂದು ಕನಸು ಕಂಡ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಅವರು ಈ ಜಲಸಂಗ್ರಹಗಾರ ನಿರ್ಮಾಣಕ್ಕೆ ಡಿಪಿಆರ್ ಸಿದ್ದಪಡಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ ಎಂದು ಕರ್ನಾಟಕ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಅಂಬಣ್ಣ ಹರಳಯ್ಯ ಅವರು, ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

ಜಿಲ್ಲೆಯ ಮಹತ್ವಾಕಾಂಕ್ಷಿ ಯೋಜನೆಯಾಗಿರುವ ತುಬಚಿ–ಬಬಲೇಶ್ವರ ಬೃಹತ್ ನೀರಾವರಿ ಯೋಜನೆಯಡಿ ಈ ಬೃಹತ್ ಜಲಸಂಗ್ರಹಗಾರಕ್ಕೆ ನೀರು ಸರಬರಾಜು ಮಾಡಲಾಗುವುದು ಎಂದು ಅಂಬಣ್ಣ ಹರಳಯ್ಯ ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

**545 ಎಕರೆ ಜಮೀನು ಅಗತ್ಯ:**

ಈ ಬೃಹತ್ ಜಲಸಂಗ್ರಹಗಾರ ನಿರ್ಮಾಣಕ್ಕೆ 545 ಎಕರೆ ಜಮೀನಿನ ಅವಶ್ಯಕತೆಯಿದೆ. ಹಾಗಾಗಿ ನಿರ್ಮಾಣವಾಗಲಿರುವ ಜಲ ಸಂಗ್ರಹಗಾರದ ಸುತ್ತಲಿರುವ ಸರ್ಕಾರಿ ಜಮೀನನ್ನು ಇದೇ ವೇಳೆ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಸರ್ಕಾರಿ ಜಮೀನನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸುವುದಕ್ಕೆ ಸಂಬಂಧಿಸಿ ದಂತೆ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು,ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಅಗತ್ಯ ಸೂಚನೆ ನೀಡಿದರು.

# ಜೀತ ಪದ್ಧತಿಯಲ್ಲಿ ಸಿಲುಕಿದ್ದ ಒಡಿಶಾ ಮೂಲದ 37 ಕಾರ್ಮಿಕರ ರಕ್ಷಣೆ



**ಬೆಳಗಾವಿ ವಾರ್ತೆ ವಿಜಯನಗರ (ಹೊಸಪೇಟೆ):** ಜಿಲ್ಲೆಯ ಮರಿಯಮ್ಮನಹಳ್ಳಿ ಹೋಬಳಿಯ ನಂದಿಬಂಡಿ ಎಂಬಲ್ಲಿ ಜೀತ ಪದ್ಧತಿಯಲ್ಲಿ ಸಿಲುಕಿದ್ದ ಒಡಿಶಾ ಮೂಲದ 37 ಕಾರ್ಮಿಕರನ್ನು ಯಶಸ್ವಿಯಾಗಿ ರಕ್ಷಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಸ್ಪಂದನ ಎಂಬ ಎನ್‌ಜಿಓ ಸಂಸ್ಥೆ ನೀಡಿದ ಖಚಿತ ಮಾಹಿತಿಯ ಮೇರೆಗೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಹಾಯಕ ಆಯುಕ್ತರು ನಂದಿಬಂಡಿ ಗ್ರಾಮದ ಮೇಲೆ ದಾಳಿ ನಡೆಸಿದರು.

ದಾಳಿಯ ವೇಳೆ ಕಾರ್ಮಿಕರು ನಾಲ್ಕು ಅಡಿ ಅಗಲದ ಪುಟ್ಟ ಮನೆಗಳಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳಿಲ್ಲದ ದಯನೀಯ ಸ್ಥಿತಿಯಲ್ಲಿ ಬದುಕುತ್ತಿದ್ದ 10 ಮಕ್ಕಳು, 11 ಮಹಿಳೆಯರು, 16 ಪುರುಷರು ಸೇರಿದಂತೆ ಒಟ್ಟು 37 ಮಂದಿ ಕಾರ್ಮಿಕರು ಇದ್ದು, ಎಲ್ಲರೂ ಒಡಿಶಾದ ಬಲಂಗೀರ್ ಮತ್ತು ನವರಂಗ್‌ಪುರ ಜಿಲ್ಲೆಯವರಾಗಿದ್ದಾರೆ.

ಈ ಕಾರ್ಮಿಕರನ್ನು ಒಡಿಶಾದಿಂದ ಕರೆತರಲಾಗಿದ್ದು, ಆರು ತಿಂಗಳ ಹಿಂದೆ ಪ್ರತಿ ವ್ಯಕ್ತಿಗೆ 40,000 ರೂಪಾಯಿ ಮುಂಗಡ ಹಣ ನೀಡಿ ಇಲ್ಲಿಗೆ ಕರೆತರಲಾಗಿತ್ತು. ಆರಂಭದಲ್ಲಿ ಆರು ತಿಂಗಳ ಅವಧಿಗೆ ಅಷ್ಟೇ ಕೆಲಸ ಮಾಡಿಸುವುದಾಗಿ ಹೇಳಿ ಕರೆತರಲಾಗಿತ್ತು. ಹಾಗೆಯೇ ಕೆಲಸದ ಆಧಾರದ ಮೇಲೆ ಹಣ ನೀಡುತ್ತೇವೆ ಎಂಬ ಭರವಸೆಯೂ ನೀಡಲಾಗಿತ್ತು. ಅದರಂತೆ ಹಣದ ಆಸೆಗೆ ವಾರವಿಡೀ ಮೈ ಮುರಿದು ಕೆಲಸ ಮಾಡಿದರೂ ಸಹ, ಇಡೀ ಕುಟುಂಬಕ್ಕೆ ವಾರಕ್ಕೆ ಕೇವಲ 500 ರೂಪಾಯಿ ಮಾತ್ರ ನೀಡುತ್ತಾರೆ. ಆದರಿಂದ ನಾವು ಆರು ತಿಂಗಳ ಹಿಂದೆ ಬಂದಿದ್ದೆವು. ನಮ್ಮ ಅವಧಿ ಮುಗಿದಿದೆ ನಾವು ಹೋಗುತ್ತೇವೆ ಎಂದು ಹೇಳಿದಾಗ ನೀವು ತಲಾ 40,000 ರೂಪಾಯಿ ಪಡೆದು ಬಂದಿದ್ದೀರಿ, ಹೋಗುವಂತಿಲ್ಲ ಎಂದು ಬೆದರಿಕೆ ಹಾಕುತ್ತಿದ್ದರು. ಹೊರ ಪ್ರಪಂಚದ ಸಂಪರ್ಕವಿಲ್ಲದಂತೆ ಕಾಯಲು ಸೆಕ್ಯೂರಿಟಿ ಗಾರ್ಡ್ ನೇಮಿಸಲಾಗಿತ್ತು ಎಂದು ಸಂತ್ರಸ್ತರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಈ ವೇಳೆ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಪ್ರತಿಕ್ರಿಯಿಸಿ, ಇದು ಅತ್ಯಂತ ಆಘಾತಕಾರಿ ಘಟನೆಯಾಗಿದೆ. ಜೀತ ಪದ್ಧತಿಯಂತಹ ಅನಿಷ್ಟ ಪದ್ಧತಿಯನ್ನು ಬೆಂಬಲಿಸುವವರ ವಿರುದ್ಧ ಈಗಾಗಲೇ ಮರಿಯಮ್ಮನಹಳ್ಳಿ ಪೋಲಿಸ್ ಠಾಣೆಯಲ್ಲಿ ಪ್ರಕರಣ (ಈಖಖ) ದಾಖಲಿಸಲಾಗಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದರು .

**ನಿಟ್ಟುಸಿರು ಬಿಟ್ಟ ಕಾರ್ಮಿಕರು :** ಒತ್ತೆಯಾಳುಗಳಾಗಿದ್ದ ಒಡಿಶಾ ಮೂಲದ 37 ಜೀವಗಳಿಗೆ ಕೊನೆಗೂ ಬಿಡುಗಡೆಯ ಭಾಗ್ಯ ದೊರೆತಿದೆ. ಜಿಲ್ಲಾಡಳಿತದ ಮಿಂಚಿನ ಕಾರ್ಯಾಚರಣೆಯಿಂದಾಗಿ ಜೀತ ಪದ್ಧತಿಯ ಸಂಕೋಲೆಯಲ್ಲಿ ನಲುಗುತ್ತಿದ್ದ 37 ಕಾರ್ಮಿಕರು ಇಂದು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಸಹಾಯಕ ಆಯುಕ್ತ ವಿವೇಕಾನಂದ ಅವರ ನೇತೃತ್ವದ ತಂಡವು ನಂದಿಬಂಡಿ ಗ್ರಾಮದ ಮೇಲೆ ದಾಳಿ ನಡೆಸಿ, ಜೀತ ಪದ್ಧತಿಯಲ್ಲಿ ಸಿಲುಕಿದ್ದ 37 ಕಾರ್ಮಿಕರ ಯಶಸ್ವಿಯಾಗಿ ರಕ್ಷಿಸಲಾಗಿದೆ. ಸುದೀರ್ಘ ಕಾಲದ ನಂತರ ದಬ್ಬಾಳಿಕೆಯಿಂದ ಮುಕ್ತರಾದ ಕಾರ್ಮಿಕರ ಮುಖದಲ್ಲಿ ಮಂದಹಾಸ ಮೂಡಿತ್ತು. ಪಂಜರದಿಂದ ಬಿಡುಗಡೆಯಾದ ಹಕ್ಕಿಗಳಂತೆ ಎಲ್ಲರ ಮೊಗದಲ್ಲಿ ಸ್ವತಂತ್ರದ ಸಂಭ್ರಮ ಮನೆ ಮಾಡಿತ್ತು.

ಜಿಲ್ಲಾಡಳಿತ ಕೇವಲ ರಕ್ಷಣೆಗೆ ಸೀಮಿತವಾಗದೇ, ಕಾರ್ಮಿಕರನ್ನು ಸುರಕ್ಷಿತವಾಗಿ ಅವರ ಸ್ವಗ್ರಾಮಕ್ಕೆ ಕಳುಹಿಸುವಲ್ಲಿ ವಿಶೇಷ ಕಾಳಜಿ ವಹಿಸಿತು. ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಖುದ್ದಾಗಿ ಹಾಜರಿದ್ದು, ರೈಲಿನ ಮೂಲಕ ಅವರ ಸ್ವ ಗ್ರಾಮಕ್ಕೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಿದರು. ಅದಷ್ಟೇ ಅಲ್ಲದೇ ಕಾರ್ಮಿಕರೊಂದಿಗೆ ಇಬ್ಬರು ಪೊಲೀಸ್ ಮತ್ತು ಕಂದಾಯ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ಸಹ ರಕ್ಷಣೆಗಾಗಿ ಕಳುಹಿಸಿಕೊಡಲಾಗಿದೆ.

ಈ ವೇಳೆ ಜಿಲ್ಲಾ ಪೊಲಿಸ್ ವರಿಷ್ಠಾಧಿಕಾರಿ ಜಾಹ್ನವಿ, ಡಿವೈಎಸ್ಪಿ ಪಿ.ಮುರಳೀಧರ, ಉಪವಿಭಾಗಾಧಿಕಾರಿ ವಿವೇಕಾನಂದ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

# ಮೇ 18 ರಿಂದ 25 ರವರೆಗೆ ಎಸ್ ಎಸ್ ಎಲ್ ಸಿ ಪರೀಕ್ಷೆ–2

## ಅಕ್ರಮಗಳಿಗೆ ಅವಕಾಶ ಕೊಡದೆ ಪಾರದರ್ಶಕವಾಗಿ ಪರೀಕ್ಷೆ ನಡೆಸಿ : ಅಪರ ಜಿಲ್ಲಾಧಿಕಾರಿ ಇ ಬಾಲಕೃಷ್ಣ

**ಬೆಳಗಾವಿ ವಾರ್ತೆ ವಿಜಯನಗರ(ಹೊಸಪೇಟೆ):** ದ್ವಿತೀಯ ಹಂತದ ಎಸ್ ಎಸ್ ಎಲ್ ಸಿ ಪರೀಕ್ಷೆ–2 ಯಾವುದೇ ಅಕ್ರಮಗಳಿಗೆ ಎಡೆಮಾಡಿಕೊಡದೆ ಅತ್ಯಂತ ಪಾರದರ್ಶಕವಾಗಿ ಪರೀಕ್ಷೆ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಇ ಬಾಲಕೃಷ್ಣ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ದ್ವಿತೀಯ ಹಂತದ ಎಸ್ ಎಸ್ ಎಲ್ ಸಿ ಪರೀಕ್ಷೆ –2 ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.


ದ್ವಿತೀಯ ಹಂತದ ಪರೀಕ್ಷೆಯು ಇದೇ ಮೇ 18 ರಿಂದ 25ರ ವರೆಗೆ ಜರುಗಲಿದ್ದು, ಜಿಲ್ಲೆಯ 5 ತಾಲೂಕುಗಳಿಂದ 2,266 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ದ್ವಿತೀಯ ಹಂತದ ಪರೀಕ್ಷೆಗಾಗಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿ 3, ಹಗರಿಬೊಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ತಲಾ ಒಂದು ಪರೀಕ್ಷಾ ಕೇಂದ್ರ ಸೇರಿ ಒಟ್ಟು 7 ಕೇಂದ್ರಗಳಲ್ಲಿ ಪರೀಕ್ಷೆ ಜರುಗಲಿದೆ.

ಪರೀಕ್ಷಾ ಕೇಂದ್ರದ ಒಳಗೆ ಮತ್ತು ಹೊರಗೆ ಸೂಕ್ತ ಭದ್ರತೆ ಕಲ್ಪಿಸಬೇಕು. ಪರೀಕ್ಷಾ ಅಕ್ರಮಗಳಿಗೆ ಆಸ್ಪದ ನೀಡದಂತೆ ಪ್ರತಿ ಕೇಂದ್ರದ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಬೇಕು. ಪರೀಕ್ಷೆ ನಡೆಯುವ ಸಮಯದಲ್ಲಿ ಕೇಂದ್ರದ ಸುತ್ತಮುತ್ತಲಿನ ಎಲ್ಲಾ ಜೆರಾಕ್ಸ್, ಸೈಬರ್ ಕೇಂದ್ರ ಕಡ್ಡಾಯವಾಗಿ ಮುಚ್ಚಬೇಕು. ನಿಯಮ ಮೀರುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವ ಎಚ್ಚರಿಕೆ ನೀಡಲಾಗಿದೆ. ಪ್ರತಿ ಪರೀಕ್ಷಾ ಕೊಠಡಿಯೂ ಸಿಸಿಟಿವಿ ಕ್ಯಾಮೆರಾಗಳ ಕಣ್ಗಾವಲಿನಲ್ಲಿ ಇರಲಿದ್ದು, ಡಿಜಿಟಲ್ ಲೋಪಗಳಿಗೆ ಅವಕಾಶವಿಲ್ಲದಂತೆ ಎಚ್ಚರವಹಿಸಬೇಕು. ಪರೀಕ್ಷೆ ಮುಗಿದ ನಂತರ ಪ್ರಶ್ನೆ ಪತ್ರಿಕೆ ಸುರಕ್ಷಿತವಾಗಿ ಸಾಗಿಸಲು 5 ಮಾರ್ಗ ವ್ಯವಸ್ಥೆ ಮಾಡಲಾಗಿದೆ. ಅದಕ್ಕಾಗಿ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ಕಲ್ಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಕೇವಲ ಭದ್ರತೆಯಷ್ಟೇ ಅಲ್ಲದೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೂ ಗಾಳಿ, ಬೆಳಕು ಮತ್ತು ಶೌಚಾಲಯದಂತಹ ಸೌಲಭ್ಯಗಳಲ್ಲಿ ಯಾವುದೇ ಕೊರತೆಯಾಗದಂತೆ ಅಗತ್ಯ ಕ್ರಮವಹಿಸಬೇಕು. ಬೇಸಿಗೆಯ ಹಿನ್ನೆಲೆಯಲ್ಲಿ ಪ್ರತಿ ಕೇಂದ್ರದಲ್ಲಿ ಶುದ್ಧ ಕುಡಿಯುವ ನೀರು ಮತ್ತು ತುರ್ತು ಚಿಕಿತ್ಸೆಗಾಗಿ ಆರೋಗ್ಯ ಸಹಾಯಕಿಯರ ತಂಡ ನಿಯೋಜಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಿದ ಅವರು, ಒಟ್ಟಾರೆಯಾಗಿ ಈ ಬಾರಿಯ ಎಸ್ ಎಸ್ ಎಲ್ ಸಿ ಪರೀಕ್ಷೆ–2ನ್ನು ಅತ್ಯಂತ ಶಿಸ್ತುಬದ್ಧವಾಗಿ ಮತ್ತು ದೋಷಮುಕ್ತವಾಗಿ ನಡೆಸಿ ಯಶಸ್ವಿಗೊಳಿಸಿ ಎಂದರು.

ಪರೀಕ್ಷೆ–1ರಲ್ಲಿ ಫಲಿತಾಂಶ ಸುಧಾರಣೆ ಬಯಸುವವರಿಗೆ ಮತ್ತು ಅನುತ್ತೀರ್ಣರಾದವರಿಗೆ ಇದು ಸುವರ್ಣಾವಕಾಶ. ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಪರೀಕ್ಷೆ ಬರೆಯಲು ಪೂರಕ ವಾತಾವರಣ ಸಿದ್ಧಪಡಿಸಲಾಗಿದೆ ಎಂದು ಎಸ್‌ಎಸ್‌ಎಲ್‌ಸಿ ಜಿಲ್ಲಾ ನೋಡಲ್ ಅಧಿಕಾರಿ ಹೆಚ್.ಎಂ.ಹುಲಿಬಂಡಿ ಸಭೆಗೆ ಮಾಹಿತಿ ನೀಡಿದರು.

ಈ ವೇಳೆ ಡಿಡಿಪಿಐ ವೆಂಕಟೇಶ್ ರಾಮಚಂದ್ರಪ್ಪ, ಬಿಇಒ ಶೇಖರಪ್ಪ ಹೊರಪೇಟೆ, ವಿವಿಧ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ನೋಡಲ್ ಅಧಿಕಾರಿಗಳು ಇದ್ದರು.



# ವಾರ್ಷಿಕ ಕ್ರೀಡಾಕೂಟ



**ಬೆಳಗಾವಿ ವಾರ್ತೆ ಮುನವಳ್ಳಿ:** ಪಟ್ಟಣದ ಶ್ರೀ ಮುರುಘರಾಜೇಂದ್ರ ಯೋಗವಿದ್ಯಾಕೇಂದ್ರ ಸಂಚಾಲಿತ ಶ್ರೀ ಚನ್ನಬಸವ ಮಹಾಸ್ವಾಮಿಜಿ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ವಾರ್ಷಿಕ ಕ್ರೀಡಾಕೂಟ ಉದ್ಘಾಟನೆ ಜರುಗಿತು.

ಪ್ರಮೋದ ಕಾಮಣ್ಣವರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಕ್ರೀಡೆಗಳು ಸಹಕಾರಿಯಾಗುತ್ತವೆ ದೈಹಿಕ ಹಾಗೂ ಮಾನಸಿಕ ಸದೃಢತೆಗಾಗಿ ವಿದ್ಯಾರ್ಥಿಗಳು ಕ್ರೀಡಾಕೂಟಗಳಲ್ಲಿ ಪಾಲ್ಗೊಂಡು ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು. ಉತ್ತಮವಾದ ಶರೀರ ಹಾಗೂ ಮನಸ್ಸನ್ನು ಹೊಂದಲು ಕ್ರಿಯಾಶೀಲರಾಗಿ ಕ್ರೀಡೆಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕು ಸರಕಾರಿ ನೇಮಕಾತಿಗಳಲ್ಲೂ ಕ್ರೀಡಾಪಟುಗಳಿಗೆ ಮೀಸಲಾತಿ ಇದ್ದು ಅದರ ಸದುಪಯೋಗ ಪಡೆಯಲು ಕ್ರೀಡೆಗಳ ಎಲ್ಲ ವಿಭಾಗ ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ವಿಜೇತರಾಗಬೇಕು ಎಂದರು.

ಅರುಣಗೌಡ ಪಾಟೀಲ, ಮಲ್ಲಿಕಾರ್ಜುನ ಜಮಖಂಡಿ, ಸಂಜು ಕಾಮಣ್ಣವರ, ಶಂಕರ ಗಯ್ಯಾಳಿ, ಐ,ಜಿ.ಸಂಕಣ್ಣವರ, ಗಂಗಾಧರ ಗೊರಾಬಾಳ, ಕೆ.ಬಿ.ನಲವಡೆ, ಎಂ.ಎಚ್.ಪಾಟೀಲ, ಬಿ.ಎಂ.ಅಪ್ಪೋಜಿ, ಪಿ.ಎಂ.ಕದಮ, ಡಿ.ಎಂ.ಗದಗಿನ, ಎಂ.ಗಿರೀಶ, ಮಂಜುಳಾ ಭಾಂಡೇಕರ, ಗಾಯತ್ರಿ ಹಿರೇಮಠ, ಐ,ಕೆ.ಮಠಪತಿ, ವಿದ್ಯಾರ್ಥಿಗಳು ಇತರರು ಉಪಸ್ಥಿತರಿದ್ದರು.



**ಬೆಳಗಾವಿ ವಾರ್ತೆ ಧಾರವಾಡ:** Government First Grade College, Dharwad ಇದರ ಸ್ನಾತಕೋತ್ತರ ವಾಣಿಜ್ಯ ವಿಭಾಗದ ಎಂ.ಕಾಂ ವಿದ್ಯಾರ್ಥಿಗಳು "Ad Finity" ಅಂತರಕಾಲೇಜು ಸ್ಪರ್ಧೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಮಾರ್ಕೆಟಿಂಗ್ ಸ್ಪರ್ಧೆಯಲ್ಲಿ ಕಿರಣ ಮೂಡಿ, ಶಿವರಾಜ್ ವಾರೀ ಹಾಗೂ ಲಕ್ಷ್ಮೀ ಎಸ್. ಬದರ್ಪುರ ಪ್ರಥಮ ಸ್ಥಾನ ಪಡೆದಿದ್ದಾರೆ. ಫೈನಾನ್ಸ್ ಸ್ಪರ್ಧೆಯಲ್ಲಿ ಐಶ್ವರ್ಯ ಗಾಣಿಗೇರ, ಮೇಘಾ ಚಂದರಗಿ ಹಾಗೂ ವಿರೇಶ ಪ್ರಥಮ ಸ್ಥಾನ ಪಡೆದಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಯಲ್ಲಿ ವಿನುತಾ ರನ್ನರ್ ಅಪ್ ಸ್ಥಾನ ಪಡೆದಿದ್ದಾರೆ. ಜೊತೆಗೆ ತಂಡವು ಒಟ್ಟಾರೆ ಜನರಲ್ ಚಾಂಪಿಯನ್ ಶಿಪ್ನ್ನು ತನ್ನದಾಗಿಸಿಕೊಂಡಿದೆ.

ವಿದ್ಯಾರ್ಥಿಗಳ ಈ ಸಾಧನೆಗೆ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.

# ಪಂಚಾಚಾರ್ಯರ ಅಡ್ಡ ಪಲ್ಲಕ್ಕಿ ಮಹೋತ್ಸವ

**ಬೆಳಗಾವಿ ವಾರ್ತೆ ರಾಣೇಬೆನ್ನೂರು:** ಕಲಾವಿದರ ತವರೂರು ಖ್ಯಾತಿಯ, ತಾಲೂಕಿನ ಆರೇಮಲ್ಲಾಪುರ ಗ್ರಾಮದಲ್ಲಿ ಹತ್ತಾರು ಸಾವಿರ ಭಕ್ತರ ಮಧ್ಯದಲ್ಲಿ ಪಂಚಾಚಾರ್ಯರ ಅಡ್ಡ ಪಲ್ಲಕ್ಕಿ ಮಹೋತ್ಸವವು ಅತೀ ವಿಜೃಂಭಣೆಯಿಂದ ನಡೆಯಿತು. ಯಾವುದೇ ಜಾತಿ, ಮತ, ಭೇದ, ಭಾವ, ಪಕ್ಷ ಪಂಗಡ ಸೋಂಕಿಲ್ಲದೆ ಎಲ್ಲ ಸಮುದಾಯದ ನಾಗರಿಕರು, ಮಹಿಳೆಯರು ಉತ್ಸವದಲ್ಲಿ ಪಾಲ್ಗೊಂಡು ಇತಿಹಾಸದ ಗ್ರಾಮೀಣ ಸಂಸ್ಕೃತಿಯ ಪರಂಪರೆಯ ಭಾವೈಕ್ಯತೆ ಮೆರೆದು ಸಂಭ್ರಮಿಸಿದರು. ಅಡ್ಡ ಪಲ್ಲಕ್ಕಿ ಉತ್ಸವದ ಮುಂಚೂಣಿಯಲ್ಲಿ ವಿರಾಜಮಾನರಾಗಿದ್ದ ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರು ಡಾ. ವೀರಸೋಮೇಶ್ವರ ರಾಜ ದೇಸಿ ಕೇಂದ್ರ ಭಗವತ್ಪಾದರು ಸರ್ವ ಭಕ್ತಾದಿಗಳಿಗೆ ತಮ್ಮ ದರ್ಶನಾಶೀರ್ವಾದ ನೀಡಿದರು. ಹಾಗೆಯೇ ಉತ್ಸವದಲ್ಲಿ ಶ್ರೀಶೈಲ ಪೀಠದ ಡಾ. ಚನ್ನ ಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯರು, ಉಜ್ಜಯಿನಿ ಜಗದ್ಗುರು ಸಿದ್ದಲಿಂಗ ರಾಜ ದೇಶಿ ಕೇಂದ್ರ ಶಿವಾಚಾರ್ಯ ಭಗವದ್ಪಾದರು.

ಕಾಶಿ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಮತ್ತು ಉತ್ತರ ಪ್ರದೇಶ ಕಾಶಿ ಡಾ. ವಿಶ್ವರಾಧ್ಯ ಮಲ್ಲಿಕಾರ್ಜುನ ಶಿವಾಚಾರ್ಯ ಭಗವತ್ಪಾದರೂ ಆರ್ಶೀವದಿಸಿದರು.

ಸಾವಿರಾರು ಕುಟುಂಬ ಹೊತ್ತ ಮಹಿಳೆಯರು ಆಲಂಕೃತವಾಗಿ ಸಾಗಿ ಸಾರ್ವಜನಿಕರ ಗಮನ ಸೆಳೆದರು. ತಮಾಷಾ ಗೊಂಬೆಗಳು, ವೀರಗಾಸೆ, ಕರಡಿ ಮಜಲು, ಡೊಳ್ಳು, ಕರಡಿ ಮಜಲು, ಕಮಲ ಮೇಳ ಪಲ್ಲಕ್ಕಿ ಉತ್ಸವಕ್ಕೆ ವಿಶೇಷ ಮೆರಗು ನೀಡಿದ್ದವು.



ಪಂಚಪೀಠಾಧೀಶ್ವರರು ಶ್ರೀ ವೀರಭದ್ರೇಶ್ವರ ದೇವಸ್ಥಾನದ ಗೋಪುರ ಕಳಸಾ ರೋಹಣ,, ಮಾತಂಗೆಮ್ಮ ದೇವಿಯ ಮರುಪ್ರಾಣ ಪ್ರತಿಷ್ಠಾಪನೆ, ಕಲ್ಮೇಶ್ವರ ದೇವರ ಮರುಪ್ರಾಣ ಪ್ರತಿಷ್ಠಾಪನೆ ನೆರವೇರಿಸಿ ದರು

ಗ್ರಾಮದಲ್ಲಿ ಮೂರು ತಾಸುಗಳ ಕಾಲ ನಡೆದ ಪಂಚಾಚಾರ್ಯರ ಅಡ್ಡ ಪಲ್ಲಕ್ಕಿ ಮಹೋತ್ಸವವೂ ಎಲ್ಲೆಡೆಯೋ ಭಕ್ತರ ಮನ ಮನೆಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ರಾತ್ರಿ 8:30ಕ್ಕೆ. ಪುರಾಣ ಪ್ರವಚನ ಮಂಗಲ ಮತ್ತು ಧರ್ಮ ಜನ ಜಾಗೃತಿ ಸಮಾವೇಶ ನಡೆದು ಹತ್ತಾರು ಸಾವಿರ ಜನರು ಸಾಕ್ಷಿಯಾದರು. ಸಮಿತಿಯ ಹತ್ತಾರು ಮುಖಂಡರು ಗ್ರಾಮದ ಮುಖಂಡರು ನಾಗರಿಕರು ಮಹಿಳೆಯರು ಯುವಕರು ಉಪಸ್ಥಿತರಿದ್ದರು.

# ಕುಂದುಕೊರತೆ, ಅಹವಾಲು ಸ್ವೀಕಾರ



**ಬೆಳಗಾವಿ ವಾರ್ತೆ ಲಕ್ಷ್ಮೇಶ್ವರ:** ಗದಗ ಜಿಲ್ಲಾ ಲೋಕಾಯುಕ್ತರಿಂದ ಪುರಸಭೆಯ ಸಭಾಭವನದಲ್ಲಿ ಸಾರ್ವಜನಿಕರು ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ ಸಭೆ ಜರುಗಿತು.

ಲೋಕಾಯುಕ್ತರ ಮುಂದೆ ಸಾರ್ವಜನಿಕರು ಪುರಸಭೆಯ ಮುಖ್ಯಾಧಿಕಾರಿಗಳ ಸಮ್ಮುಖದಲ್ಲಿಯೇ ಪಟ್ಟಣದಲ್ಲಿನ ಕುಡಿಯುವ ನೀರು ಸ್ವಚ್ಛತೆ ಹದಗೆಟ್ಟ ರಸ್ತೆಗಳು ಜನನಮರಣ ದಾಖಲೆ ಪಡೆ ಯಲು ಅಲೆದಾಟ ಸಿಬ್ಬಂದಿಯ ಸ್ಪಂದನೆಯ ಕೊರತೆ ಅಂಗನವಾಡಿ ನೇಮಕಾತಿಯಲ್ಲಿ ತಾರತಮ್ಯ ಆಶ್ರಯ ನಿವೇಶನ ಹಂಚಿಕೆ ಹೀಗೆ ಹತ್ತು ಹಲವು ಸಮಸ್ಯೆಗಳು ಸುರಿಮಳೆಯನ್ನೇ ಲೋಕಾಯುಕ್ತಕರ ಗಮನಕ್ಕೆ ತಂದರು.

ಸಭೆಯಲ್ಲಿ ಮೂರನೇ ವಾರ್ಡಿನಲ್ಲಿ ಮನೆಗಳ ಎದುರೇ ಸಾರ್ವಜನಿಕ ಶೌಚಾಲಯ ನಿರ್ಮಾಣ ಕಾರ್ಯ ನಡೆದಿದೆ ಅದನ್ನು ತಡೆಗಟ್ಟುವಂತೆ ಲೋಕಾಯುಕ್ತಕರ ಗಮನಕ್ಕೆ ತಂದರು ಇದಕ್ಕೆ ಸ್ಪಂದಿಸಿದ ಲೋಕಾಯುಕ್ತ ಡಿವೈಎಸ್ಪಿ ವಿಜಯ ಬಿರಾದರವರು ಕೂಡಲೆ ತಕರಾರು ನೀಡುವಂತೆ ಸೂಚಿಸಿದರು.

ಇಟ್ಟೀ ಕೆರೆಯ ಒತ್ತುವರಿ ತೆರುವು ಗೊಳಸಿ ಅಭಿವೃದ್ಧಿಪಡಿಸುವಂತೆ ಸಾರ್ವಜನಿಕರು ಲೋಕಾಯುಕ್ತರ ಮುಂದೆ ಹೇಳಿದರು.

ಪಟ್ಟಣದಲ್ಲಿ ಹಂಚಿಕೆಯಾಗದೆ ಉಳಿದಿರುವ ಆಶ್ರಯ ಮನೆ ನಿವೇಶನ ಹಂಚಿಕೆ ಮತ್ತು ಫಲಾನುಭವಿಗಳಿಗೆ ಪಹಣಿ ವಿಚಾರಣೆ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ಸೂಚಿಸಬೇಕು ಎಂದು ಸಭೆಯಲ್ಲಿ ಸಾರ್ವಜನಿಕರು ಆ ಗ್ರಹ ಪಡಿಸಿದರು.

ಕುಡಿವ ನೀರಿನ ಸಂಬಂಧಪಟ್ಟಂತೆ ಪುರಸಭೆಯವರಿಗೆ ಚಾಟಿ ಬೀಸಿದ ಲೋಕಾಯುಕ್ತ ಡಿವೈಎಸ್ಪಿ 15 ದಿನಕ್ಕೊಮ್ಮೆ ತಿಂಗಳಿಗೊಮ್ಮೆ ಕುಡಿಯುವ ನೀರು ಬಿಟ್ಟರೆ ಸಾರ್ವಜನಿಕರ ಪಾಡೇನು ನೀವೇನಾದರೂ ಸಮರ್ಪಕ ವ್ಯವಸ್ಥೆ ಮಾಡದಿದ್ದರೆ ಕಣ್ಣು ಮುಚ್ಚಿ ಕುಳಿತುಕೊಳ್ಳಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

ಸಾರ್ವಜನಿಕ ಕುಂದು ಕೊರತೆ ಸಭೆಯಲ್ಲಿ ಒಟ್ಟು 16 ಅರ್ಜಿಗಳು ಬಂದಿದ್ದು ಅದರಲ್ಲಿ ಹತ್ತು ಅರ್ಜಿಗಳನ್ನು ಫಾರಂ ನಂಬರ10 ನ್ನು ತುಂಬಿ ಇಲಾಖೆ ಹಿರಿಯ ಅಧಿಕಾರಿಗಳಿಗೆ ಬೆಂಗಳೂರಿಗೆ ಕಳುಹಿಸಿ ಕ್ರಮಕ್ಕೆ ಸೂ ಚಿ ಸಲಾಗುವದು ಎಂದರು.

ಸಭೆಯಲ್ಲಿ ಮುಖ್ಯ ಅಧಿಕಾರಿ ಪರಶುರಾಮ ಗುಡದಾರಿ ತಾಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಂಜುಳಾ ಹಕಾರಿ ತಾಲೂಕ ಮಟ್ಟದ ಇಲಾಖೆ ಅಧಿಕಾರಿಗಳು ಪುರಸಭೆ ಸಿಬ್ಬಂದಿ ಇದ್ದರು.

# ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ




**ಬೆಳಗಾವಿ ವಾರ್ತೆ ಮೂಡಲಗಿ:** ಕೌಜಲಗಿಯಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಾಣ ವಾಗಿದ್ದರೂ ಸಿಬ್ಬಂದಿ ಕೊರತೆ ಎದುರಿಸುತ್ತಿದ್ದು, ಮುಂದಿನ ದಿನಗಳಲ್ಲಿ ಕೌಜಲಗಿ ಸಮುದಾಯ ಆರೋಗ್ಯ ಕೇಂದ್ರವನ್ನು ನಮ್ಮ ಬಿಎಲ್ ಜೆ ಟ್ರಸ್ಟಿನ ಮೂಲಕ ನಿರ್ವಹಿಸಲು ಚಿಂತನೆ ನಡೆಸುತ್ತಿರುವುದಾಗಿ ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಆಶಯ ವ್ಯಕ್ತಪಡಿಸಿದರು. ಗುರುವಾರ ತಾಲ್ಲೂಕಿನ ಕಮಲದಿನ್ನಿ ಗ್ರಾಮದ ಮಹಾತ್ಮಾ ಗಾಂಧಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ನೀಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದ್ದಾಗಿ ಅವರು ಹೇಳಿದರು.

ಕೌಜಲಗಿ ಸೇರಿದಂತೆ ಕ್ಷೇತ್ರದ ಅನೇಕ ಕಡೆಗಳಲ್ಲಿ ಆಸ್ಪತ್ರೆಗಳಿದ್ದರೂ ಜನರಿಗೆ ಅವುಗಳ ಸೌಲಭ್ಯಗಳು ಸಿಗುತ್ತಿಲ್ಲ. ಸಿಬ್ಬಂದಿಗಳ ಕೊರತೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಇಷ್ಟರಲ್ಲೇ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಇವುಗಳಿಗೆ ಪರಿಹಾರ ಕಂಡುಕೊಳ್ಳಲಾಗುವುದು. ಇದರ ಜೊತೆಯಲ್ಲಿ ಶಿಕ್ಷಕರ ಕೊರತೆಯೂ ಸಹ ಕಂಡು ಬಂದಿದ್ದು, ಅಲ್ಲಿಯೂ ಸಹ ನಮ್ಮ ಟ್ರಸ್ಟ್ ಮೂಲಕ ಅಗತ್ಯವಿರುವ ಕಡೆಗಳಲ್ಲಿ ಅತಿಥಿ ಶಿಕ್ಷಕರನ್ನು ನಿಯುಕ್ತಿ ಮಾಡಲಾಗುವುದು ಎಂದರು.

ಹಿಡಕಲ್ ಜಲಾಶಯದಿಂದ ಘಟಪ್ರಭಾ ಬಲದಂಡೆ, ಎಡದಂಡೆ ಮತ್ತು ಸಿಬಿಸಿ ಕಾಲುವೆಗಳಿಗೆ ನೀರು ಹರಿಸಲು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರಿಗೆ ಮನವಿ ಮಾಡಿಕೊಂಡಿದ್ದು, ನಾಲ್ಕೈದು ದಿನಗಳಲ್ಲಿ ಮೂರು ಕಾಲುವೆಗಳಿಗೆ ನೀರನ್ನು ಬಿಡುಗಡೆ ಮಾಡುವ ಆಶ್ವಾಸನೆಯನ್ನು ಸಚಿವರು ನೀಡಿದ್ದಾರೆ. ಇದರಿಂದ ರೈತರಿಗೆ ಮತ್ತಷ್ಟು ಅನುಕೂಲವಾಗಲಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ ಜೆಜೆಎಂ ಕಾಮಗಾರಿಯು ಜನರಿಗೆ ಮತ್ತಷ್ಟು ಹತ್ತಿರವಾಗಬೇಕು. ಈ ದಿಸೆಯಲ್ಲಿ ಅಧಿಕಾರಿಗಳು ಪ್ರತಿ ಗ್ರಾಮದ ಮನೆ,ಮನೆಗೆ ತೆರಳಿ ನಲ್ಲಿ ನೀರಿನ ಸಂಪರ್ಕದ ಕುರಿತು ಮಾಹಿತಿಯನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮ ಪಂಚಾಯತಿಗೆ ಆಡಳಿತಾಧಿಕಾರಿ ನೇಮಕಗೊಂಡಿದ್ದು, ಸ್ಥಳೀಯ ಜನರ ಸಮಸ್ಯೆಗಳನ್ನು ಆಲಿಸಿ ಅವುಗಳನ್ನು ಪರಿಹರಿಸುವ ಪ್ರಯತ್ನ ಮಾಡುವದಾಗಬೇಕು. ಒಳಚರಂಡಿ, ಬೀದಿ ದೀಪ, ಕುಡಿಯುವ ನೀರು ಸೇರಿದಂತೆ ಜನರ ಮೂಲ ಸೌಕರ್ಯಗಳನ್ನು ನೀಗಿಸಬೇಕು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಾರಿಗೆ ವ್ಯವಸ್ಥೆಯನ್ನು ಸುಗಮಗೊಳಿಸಬೇಕು. ಪ್ರಯಾಣಿಕರ ಬೇಡಿಕೆಗಳಂತೆ ಸಾರಿಗೆಗಳನ್ನು ಓಡಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಕಲ್ಮಡ್ಡಿ ಮತ್ತು ರಾಮೇಶ್ವರ ಏತ ನೀರಾವರಿ ಭಾಗದ ರೈತರಿಗೆ ಅಗತ್ಯವಿರುವ ಸಂದರ್ಭದಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿಕೊಡಲು ಅಧಿಕಾರಿಗಳಿಗೆ ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಸೂಚನೆ ನೀಡಿದರು.

ಮೂಡಲಗಿ ತಹಶಿಲ್ದಾರ ಶ್ರೀಶೈಲ ಗುಡುಮೆ, ಮೂಡಲಗಿ ತಾ.ಪಂ. ಇಓ ಪ್ರಶಾಂತ ನೆರಳೆಕರ, ಗೋಕಾಕ ತಾಪಂ ಇಓ ಪರಶುರಾಮ ಗಸ್ತಿ, ಮೂಡಲಗಿ ಸಿಪಿಐ ಶ್ರೀಶೈಲ ಬ್ಯಾಕೂಡ, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ ಹಿರೇಮಠ, ಜಿ.ಬಿ.ಬಳಗಾರ,ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ರೈತರು ಆಧುನಿಕ ಕೃಷಿಯತ್ತ ಮುಖ ಮಾಡಿ: ಶಾಸಕ ಲಕ್ಷ್ಮಣ ಸವದಿ

**ಬೆಳಗಾವಿ ವಾರ್ತೆ ಅಥಣಿ :** ಭಾರತ ಕೃಷಿ ಪ್ರಧಾನ ದೇಶ. ಶೇ 68 ಭಾಗ ಕೃಷಿ ವ್ಯವಸ್ಥೆ ಹೊಂದಿದ್ದೇವೆ. ಕೃಷಿಯಲ್ಲಿ ವಿನೂತನ ಪ್ರಯೋಗ ಮಾಡುವುದು ಅವಶ್ಯಕತೆ ಇದೆ. ಮಂಜುನಾಥ ಹುಲಸದಾರ ಇಂತಹ ಉತ್ತಮ ವಿನೂತನ ಪ್ರಯೋಗ ಮಾಡಿದ್ದಾರೆ. ರೈತರು ಆಧುನಿಕ ಕೃಷಿಯತ್ತ ಮುಖ ಮಾಡಿ ಎಂದು ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು

ತಾಲೂಕಿನ ರಡ್ಡೆರಹಟ್ಟಿ ಗ್ರಾಮದಲ್ಲಿ ಹುಲಸದಾರ ತೋಟದಲ್ಲಿ ಮಂಜುನಾಥ ಹುಲಸದಾರ ಅವರ ನೇತೃತ್ವದಲ್ಲಿ ಸ್ವಯಂ ಚಾಲಿತ ರೇಷ್ಮೆ ನೂಲು ತೆಗೆಯುವ ಘಟಕಕ್ಕೆ ಮಾಜಿ ಉಪಮುಖ್ಯ ಮಂತ್ರಿ ಹಾಗೂ ಅಥಣಿ ಶಾಸಕ ಲಕ್ಷ್ಮಣ ಸವದಿ ಶಂಕುಸ್ಥಾಪನೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡುತ್ತ ಮಾನವನಿಗೆ ಅನ್ನ, ಬಟ್ಟೆ, ಅವಶ್ಯಕತೆ ಇರುವ ಅಂಶಗಳಾಗಿವೆ. ಇತ್ತೀಚಿಗೆ ರೇಷ್ಮೆ ಬೇಡಿಕೆ ಕಡಿಮೆ ಆಗುತ್ತಿದೆ. ಆದರೆ ಭಾರತದ ರೇಷ್ಮೆಗೆ ಬಹು ಬೇಡಿಕೆ, ಮೌಲ್ಯ ಹೊಂದಿದೆ. ಅಥಣಿಯ ಅನೇಕ ರೇಷ್ಮೆ ಬೆಳೆಯುವ ರೈತರು ಗೂಡು ಬಿಡಿಸಲು ರಾಮನಗರಕ್ಕೆ ಹೋಗಬೇಕಾಗಿತ್ತು. ಆದರೆ ಮಂಜುನಾಥ ತುಂಬಾ ಮುತುವರ್ಜಿ ವಹಿಸಿ ರೈತರ ಸಂಕಷ್ಟ ಪರಿಹರಿಸಲು ಉತ್ತಮ ಪ್ರಯತ್ನ ಮಾಡಿದ್ದಾರೆ. ಇದರಿಂದ ರೈತರಿಗೆ ಮಧ್ಯವರ್ತಿಗಳ ಹಾವಳಿ, ದಲ್ಲಾಳಿ ಇದರಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ದೊರಕಿಸಿದ್ದಾರೆ. ಇಂದು ಎ ಐ ಬಂದಿರುವ ಹಿನ್ನೆಲೆಯಲ್ಲಿ ವೈದ್ಯರು, ಇಂಜಿನಿಯರ್ ಅಷ್ಟೇ ಅಲ್ಲದೇ ಎಲ್ಲ ಕ್ಷೇತ್ರದಲ್ಲಿ ಸಾಕಷ್ಟು ಉದ್ಯೋಗ ಕಳೆದುಕೊಳ್ಳುವ ಭೀತಿ ಎದುರಾಗಿದೆ. ಇಂದು ಸರಕಾರಿ ನೌಕರಿ ಅವಲಂಬಿಸಿ ಬದುಕಲು ಸಾಧ್ಯವಿಲ್ಲ.ಯುವಕರು ಸಾಕಷ್ಟು ಪ್ರಯತ್ನಿಸಿ ರೇಷ್ಮೆ ಬೆಳೆದು ಸ್ವ ಉದ್ಯೋಗ ಮಾಡಬೇಕು ಎಂದು ಕರೆ ನೀಡಿದರು.ಇಂದು ಹೈಬ್ರಿಡ್ ಬೀಜ ಬಂದಿದೆ. ಪರಿಣಾಮ ನಮ್ಮಲ್ಲಿ ಕ್ರಿಮಿನಾಶಕ, ಗೊಬ್ಬರ ಬಳಸಿ ತಿನ್ನುವ ಆಹಾರ, ಎಣ್ಣೆ ಎಲ್ಲ ತಿನ್ನುವ ಪರಿಣಾಮ ಕ್ಯಾನ್ಸರ್ ನಂತಹ ಭಿಕರ ರೋಗಕ್ಕೆ ತುತ್ತಾಗುವ ಸನ್ನಿವೇಶ ನಿರ್ಮಾಣವಾಗಿದೆ. ಎಲ್ಲ ರೈತರು ಸ್ವಾವಲಂಬಿಗಳಾಗಿ ತಮ್ಮ ಸ್ವಂತ ಮನೆಗಳಿಗೆ ಬೇಕಾಗುವಷ್ಟು ಉತ್ತಮ ಕಾಯಿಪಲ್ಯೆ, ಹಣ್ಣು ಹಂಪಲು ಬೆಳೆದು ತಿನ್ನಿ ಎಂದು ಕಿವಿ ಮಾತು ಹೇಳಿದರು.


ಬೆಳಗಾವಿ ವಿಭಾಗದ ಇಲಾಖೆ ಜಂಟಿ ನಿರ್ದೇಶಕರು ಪಿ ಎಲ್ ಚಂದ್ರಪ್ಪ ಮಾತನಾಡಿ ಇದು ಒಂದು ರೈತರಿಗೆ ಗುಡಿ ಕೈಗಾರಿಕೆ ಸ್ವಯಂ ಉದ್ಯೋಗ ಚಟುವಟಿಕೆಗೆ ಅವಕಾಶ ನೀಡುತ್ತದೆ. ಮಹಿಳೆಯರು ಇರುವವರೆಗೆ ರೇಷ್ಮೆ ಬೇಡಿಕೆ ಇರುತ್ತದೆ. ಚೀನಾ ನಂತರ ಭಾರತ ರೇಷ್ಮೆ ಉತ್ಪಾದನೆಯಲ್ಲಿ ಮುಂದಿದೆ, ತುಂಬಾ ದುಬಾರಿ ಆಗಿರುವ ರೇಷ್ಮೆ ರೈತರಿಗೆ ಲಾಭದಾಯಕವಾಗಿದೆ. ಇಂದು ತರಬೇತಿ ಇಲ್ಲದೇ ಯಾವ ಉದ್ಯೋಗ ಮಾಡಲು ಸಾಧ್ಯವಿಲ್ಲ. ಕೃಷಿ ಆಧಾರಿತ ರೇಷ್ಮೆ ಉದ್ಯೋಗ, ಹಿಪ್ಪು ನೇರಳೆ ಬೆಳೆ ಬೆಳೆಯುವುದು, ರೇಷ್ಮೆ ಹುಳು



ಸಾಕಾಣೆ, ನಂತರ ಬಟ್ಟೆ ತಯಾರಿ ಸುವುದು ಮೂರು ಹಂತದಲ್ಲಿ ಪ್ರಕ್ರಿಯೆ ಜರುಗುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ 10750 ಜನ ರೇಷ್ಮೆ ಬೆಳೆಯುತ್ತಿದ್ದಾರೆ.ಪ್ರತಿ ಎರಡುವರೇ ತಿಂಗಳಲ್ಲಿ 270 ಕೆ ಜಿ ಬೆಳೆ ಬೆಳೆಯಬಹುದು.ಕರ್ನಾಟಕದಲ್ಲಿನ ರೈತರು ನೌಕರಿಗೆ ಕಟ್ಟು ಬೀಳದೆ ಸಾಕಷ್ಟು ಲಾಭದಾಯಕ ಬೆಳೆ ಬೆಳೆಯಬಹುದು. ಎಕರೆಗೆ 45 ಸಾವಿರ ರೂ ಸಹಾಯಧನ ದೊರೆಯುತ್ತದೆ. ಜೊತೆಗೆ ನರೇಗಾ ದಲ್ಲಿ ಕೂಡಾ ಸಹಾಯ ಧನ ಸಿಗುತ್ತದೆ. ಹುಳು ಸಾಕಾಣಿಕೆ ಶೆಡ್ಡಗೆ ಸಹಾಯ ಧನ ಸಿಗುತ್ತದೆ ಸರಕಾರಿ ನೌಕರಿ ಅವಲಂಬಿಸದೆ ರೇಷ್ಮೆ ಬೇಸಾಯ ಮಾಡುವಂತೆ ಸಲಹೆ ನೀಡಿದರು.ಈ ವೇಳೆ ಶಾಸಕರು ಮಂಜುನಾಥ ಹುಲಸದಾರ ಅವರಿಗೆ ಕಾರ್ಖಾನೆ ಆರಂಭಿಸಲು ಅನುಮತಿ ಪತ್ರ ವಿತರಿಸಿದರು.ತಾಲೂಕು ರೇಷ್ಮೆ ಇಲಾಖೆಯಿಂದ ರೈತರಿಗೆ ಸ್ವಚ್ಛತೆಗೆ ಪೂರಕವಾಗಿ ಔಷಧಿ ಮ್ಯಾಟ್ ಸೇರಿ ಹಲವು ಪರಿಕರ ವಿತರಿಸಲಾಯಿತು.

ಸಾನಿಧ್ಯವನ್ನು ಶಿವಮೊಗ್ಗದ ಪರಮ ಪೂಜ್ಯ ಕೊಡಲಿ ಅರುಣಾಚಲ ಅಯ್ಯರ ವಹಿಸಿ ಆಶೀರ್ವಚನ ನೀಡಿದರು. ಬೆಳಗಾವಿ ವಿಭಾಗದ ಇಲಾಖೆ ಜಂಟಿ ನಿರ್ದೇಶಕರು ಪಿ ಎಲ್ ಚಂದ್ರಪ್ಪ, ಬೆಳಗಾವಿ ರೇಷ್ಮೆ ಇಲಾಖೆ ಉಪನಿರ್ದೇಶಕ ಮಹೇಶಕುಮಾರ ಬಾಗಿ,ಮುರಗೆಪ್ಪ ಹುಲಸದಾರ, ಭೀಮಪ್ಪ ಹುಲಸದಾರ, ಬಸಲಿಂಗಯ್ಯ ಹಿರೇಮಠ, ಹಣಮಂತ ಬಿರಾದಾರ, ಡಾ. ಎಂ ಎ ಚನ್ನಾಪುರ ಸೇರಿದಂತೆ ಹಲವಾರು ಗ್ರಾಮಗಳ ರೈತ ಬಂಧುಗಳು ಉಪಸ್ಥಿತರಿದ್ದರು.

# ಶ್ರೀಕ್ಷೇತ್ರ ಯಲ್ಲಮ್ಮನಗುಡ್ಡಕ್ಕೆ ಖ್ಯಾತ ಕೊಳಲುವಾದಕ ಪ್ರವೀಣ ಗೋಡಖಿಂಡಿ ಭೇಟಿ; ದೇವಿ ದರ್ಶನ



ದೇವಸ್ಥಾನ ವತಿಯಿಂದ ಡಾ,ಪ್ರವೀಣ ಗೋಡಖಿಂಡಿ ಕುಟುಂಬವನ್ನು ಮಂಜುನಾಥ ಅಂಗಡಿ ಶಾಲೂಹೊದಿಸಿ ಸತ್ಕರಿಸಿದರು.

**ಬೆಳಗಾವಿ ವಾರ್ತೆ ಉಗರಗೋಳ:** ಶ್ರೀಕ್ಷೇತ್ರ ಯಲ್ಲಮ್ಮನಗುಡ್ಡಕ್ಕೆ ಖ್ಯಾತ ಕೊಳಲುವಾದಕ ಪಂಡಿತ ಡಾ, ಪ್ರವೀಣ ಗೋಡಖಿಂಡಿ ಗುರುವಾರ ರಂದು ಕುಟುಂಬ ಸಮೇತ ಶ್ರೀ ರೇಣುಕಾ ಯಲ್ಲಮ್ಮಾ ದೇವಿಯ ದರ್ಶನ ಆಶೀರ್ವಾದ ಪಡೆದುಕೊಂಡರು.

ಯಲ್ಲಮ್ಮಾ ದೇವಿಯ ಸನ್ನಿಧಿಯಲ್ಲಿ ಪ್ರವೀಣ ಗೋಡಖಿಂಡಿ ಹಾಗೂ ಪುತ್ರ ಷಡ್ಜ ಗೋಡಖಿಂಡಿ ಸುಶ್ರಾವ್ಯವಾಗಿ ಕೊಳಲು ನುಡಿಸಿ ಭಕ್ತಿಯ ಹೋಳೆಯನ್ನೇ ಹರಿಸಿದರು.

ಪಂಡಿತ ಡಾ, ಪ್ರವೀಣ ಗೋಡಖಿಂಡಿ ಕುಟುಂಬವನ್ನು ದೇವಸ್ಥಾನ ವತಿಯಿಂದ ಮಂಜುನಾಥ ಅಂಗಡಿ ಶಾಲೂಹೊದಿಸಿ ಸತ್ಕರಿಸಿದರು.

ಸಾರಿಕಾ ಪ್ರವೀಣ ಗೋಡಖಿಂಡಿ, ರವೀಂದ್ರ ಡಂಬಳ, ಸಂಗಮೇಶ ಪಂಪನವರ, ಸದಾನಂದ ಈಟಿ, ಅನೀಲ ಗುಡಿಮನಿ, ಅನುರಾಧಾ ಡಂಬಳ, ವ್ಹಿ ಎಮ್ ಮೋಖಾಸಿ, ಶೀತಲ್ ಡಂಬಳ, ವಿಧ್ಯಾಶಂಕರ ಜೋಷಿ, ಲತಾ ಕುಲಕರ್ಣಿ, ಮಂಜು ಪವಾರ, ಪ್ರಮುಲ್ ಕುಲಕರ್ಣಿ, ಜಗದೀಶ ರೇವಣ್ಣವರ, ಸುರಲಿ, ಮಂಜುನಾಥಗೌಡ ಸಂಧಿಮನಿ, ಬಾಳೇಶ ಶೇಟ್ಟೇಪ್ಪನವರ, ಪಂಡಿತ ಯಡೂರಯ್ಯ ಹಾಗೂ ದೇವಸ್ಥಾನದ ಸಿಬ್ಬಂದಿ ಇದ್ದರು.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI, KARNATAKA - 590001